Licence No. 60,
Licenced to Post without Prepayment

Reg. No. M. 1550,
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೩೦ | ಶಾರೀಕು ೧೮೬೯ನೇ ಶುಕ್ರವಾರ | ಸಂಚಿಕೆ ೧

॥ ಶಾಂತಿನಿಕೇತನ ॥

ಗೊಂದಲಗಳಿಂದ ಕೂಡಿ ಜನರ ಜೀವಕಳೆಯುನ್ನೇ ಹಿಂಡುತ್ತಿರುವ ನಾಗರಿಕತೆಯಿಂದ ಬಹು ದೂರದಲ್ಲಿದ್ದು ಶಾಂತಿಯು ನೆಲೆವೀಡಾಗಿ ಶಾಂತಿನಿಕೇತನವು ರಾರಾಜಿಸುತ್ತಿದೆ. ಪಾಶ್ಚಿಮಾತ್ಯ ಸಂಸ್ಕೃತಿಯು ನಮ್ಮ ದೇಶವನ್ನು ಆವರಿಸಿ ಆದಕ್ಷ ಪುರಾತನ ಅವನತಿಗೆ ಕಾರಣವಾಗಿರುವಾಗ ಶಾಂತಿನಿಕೇತನವು ಮಂಜು ಮುಸುಕಿದ ಆಕಾಶವನ್ನು ಸೂರ್ಯ ಪ್ರಭೆಯು ಶುಭ್ರಗೊಳಿಸುವಂತೆ ತನ್ನ ಮಹತ್ಕಾಧನೆಗಳಲ್ಲಿ ತೊಡಗಿದೆ.

ಭಾರತವು ಜಗತ್ತಿನಲ್ಲಿ ತನ್ನ ಸ್ಥಾನ ಮಾನಗಳನ್ನು ರಕ್ಷಿಸಿಕೊಂಡು ಪರಕೀಯರ ವರ್ಷಗಳ ಸಂಕಲೆಗಳಿಂದ ಸ್ವತಂತ್ರ ಹೊಂದಿ ಮರೆಯಬೇಕೆಂದೇ ಶಾಂತಿನಿಕೇತನದ ಸ್ಥಾಪನೆಯಾಗಿದೆ. ಭಾರತದ ಆತ್ಮವನ್ನು ರಕ್ಷಿಸುವರೆ, ಜಗತ್ತಿನ ರಾಷ್ಟ್ರಗಳ ಸಮೂಹದಲ್ಲಿ ಭಾರತವು ತನ್ನ ತಲೆಯೆತ್ತಿ ಮೆರೆಯುವಂತೆ ಭಾರತದ ಜನತೆಗೆ ಆವಶ್ಯಕವೆನಿಸುವ ವಿದ್ಯೆಯನ್ನು ಹಸರಿಸುವರೆ ಶಾಂತಿನಿಕೇತನವು ಉಗಮವಾಯಿತು. ಈ ಘನ ಧ್ಯೇಯಗಳನ್ನು ಸಾಧಿಸುವುದರಲ್ಲಿ ತೊಡಗಿದ ಶಾಂತಿನಿಕೇತನವು ಎದುರು ಬಂದ ಎಡರು ತೊಡರುಗಳನ್ನು ಉರುಳಿಸಿ ಮುಂದೆ ಸಾಗುತ್ತಿದೆ. ಭಾರತದ ಜ್ಯೋತಿಯು ನಂದಿ ಹೋಗದಂತೆ ರಕ್ಷಣೆಯನ್ನು ನೀಡುತ್ತಲಿದೆ.

ಶಾಂತಿನಿಕೇತನದ ಸ್ಥಾಪನೆಗೆ ಕಾರಣರಾದ ವಿಶ್ವಕವಿ ರವೀಂದ್ರನಾಥ ಠಾಗೋರರು ಪಾಶ್ಚಿಮಾತ್ಯ ವಿದ್ಯಾಕ್ರಮವನ್ನು ತೆಗಳಿದವರಲ್ಲ, ಅದನ್ನು ತಿರಸ್ಕರಿಸಿ ದೂರ ಮಾಡಿದವರಲ್ಲ. ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅವರು ದ್ವೇಷಿಸಿದವರೂ ಅಲ್ಲ. ಸುಧಾರಣೆಯೇ ಧ್ಯೇಯ ಆಗಬಹುದು. ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ಸಂಸ್ಕೃತಿಗಳೆರಡನ್ನೂ ಒಂದು ಗೂಡಿಸಿ ಈ ಪುರಾತನ ನಾಡಿನ ಸಂಸ್ಕೃತಿ ಸಂಪತ್ತನ್ನು ಅಭಿವೃದ್ಧಿಗೊಳಿಸಬೇಕೆಂಬುದೇ ಆಪರ ಸಾಧನೆ. ಶಾಂತಿನಿಕೇತನದಲ್ಲಿ ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ವಿದ್ಯಾಕ್ರಮಗಳೆರಡೂ ಸಮ್ಮಿಳಿತವಾಗಿವೆ. ಯಾವುದೇ ಭೇದಭಾವ, ಅಂತಸ್ತಗಳಾವುದೂ ಇಲ್ಲದೆ ಪ್ರೇಮಮಯ ತಳಹದಿಯಿಂದ ಕಟ್ಟಲ್ಪಟ್ಟ ಆ ತಪೋವನದಲ್ಲಿ ವಿವಿಧ ವಿದ್ಯಾಕ್ರಮಗಳು ಹಾಲು ನೀರಿನಂತೆ ಬೆರಸಿತ್ತಿದೆ. ಕಲ್ಕತ್ತಾ ವಿಶ್ವ ವಿದ್ಯಾಲಯದ ನಿಯಮಗಳನ್ವಯ ಪ್ರೌಢ ವಿದ್ಯಾಭ್ಯಾಸ ಹೊಂದುವ ಏರ್ಪಾಡೂ ಇದೆ.

ಪೂರ್ವ ಮತ್ತು ಪಶ್ಚಿಮಗಳೆರಡರ ಜ್ಞಾನವನ್ನೂ ಒಂದು ಗೂಡಿಸಲು ಕವಿ ರವೀಂದ್ರರು ಮಾಡಿದ ಪ್ರಯತ್ನಗಳೆಲ್ಲಾ ಶಾಂತಿನಿಕೇತನದಲ್ಲಿ ಫಲ ಬಿಟ್ಟಿವೆ. ಅವೆರಡರ ಸಂಯೋಗದ ಪ್ರತಿ ಫಲ ಒಡೆದು ಕಾಣುತ್ತಿದೆ. ಸಂಶೋಧನೆಯಲ್ಲಿ ನಿರತರಾದ ವಿದ್ಯಾರ್ಥಿಗಳಿಗೆ ಅತ್ಯಂತ ಯೋಗ್ಯವಾಗಿರುತ್ತದೆ ಪೌರ್ವಾತ್ಯ ಶಿಕ್ಷಣ ಹೊಂದುವವರಿಗೆ ಅದೇ ದೊಡ್ಡ ಕೇಂದ್ರ.

ಭಾರತದ ವಿವಿಧ ಭಾಗಗಳ ವಿವಿಧ ಜಾತಿ ಮತಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಶಾಂತಿನಿಕೇತನದಲ್ಲಿ ಕಾಣಬಹುದು. ಹೊರದೇಶಗಳ ವಿದ್ಯಾರ್ಥಿಗಳೂ ಅನೇಕರಿದ್ದಾರೆ ಯಾವ ಭೇದಗಳೂ ಇಲ್ಲದೆ ಅವರು ಒಂದೇ ತಾಯಿ ಮಕ್ಕಳಂತೆ ಜೀವಿಸುತ್ತಿರುವುದು ಕಂಡಿನೆ. ನಿಜ ವಿದ್ಯಾಭ್ಯಾಸವು ಜಾತಿ ಮತ ಭೇಧಗಳಿಲ್ಲದೆ ಎಲ್ಲರಿಗೂ ಸಮಾನವಾದ ರೀತಿಯಲ್ಲಿ ಕೊಡಲ್ಪಡುತ್ತಿದೆ. ಮನುಷ್ಯನು ಪರಮಾತ್ಮನಿಗೆ ಹತ್ತಿರ ಸರಿಯುತ್ತಿರುವಂತೆ ಭಾಸವಾಗುತ್ತಿದೆ. ಠಾಗೋರರು ಈ ಕನಸನ್ನೇ ಕಟ್ಟಿದ್ದರು. ನಿಜ ವಿದ್ಯಾಭ್ಯಾಸವೇನು, ಅದು ಯಾವ ರೀತಿಯಲ್ಲಿ ಪ್ರಸಾರವಾಗಬೇಕು ಎಂಬುದನ್ನು ಅವರು ತಿಳಿದಿದ್ದರು. ಶಾಂತಿನಿಕೇತನವು ಆ ಕನಸನ್ನು ಕಾರ್ಯದಲ್ಲಿ ತೋರಿಸುತ್ತಿದೆ.

ಶಾಂತಿ ನಿಕೇತನವು ರಮಣೀಯ ವಾತಾವರಣದಲ್ಲಿ, ಪ್ರಕೃತಿಯ ಮಡಿಲಲ್ಲಿ ಹಚ್ಚ ಹಸಿರಿನ ಸೌಂದರ್ಯದಿಂದ ಕೂಡಿದ್ದು ಬೋಲಪುರದಿಂದ ಎರಡು ಮೈಲುಗಳಷ್ಟು ದೂರದಲ್ಲಿದೆ. ಆಶ್ರಮದ ಸುತ್ತು ಮುತ್ತಲೂ ಒಂದು ಸಣ್ಣ ಪಟ್ಟಣವು ನಿಧಾನವಾಗಿ ತಲೆಯೆತ್ತುತ್ತಿದೆ. ಹೈಲು ಸ್ಟೇಶನ್‌ನಿಂದ ಪ್ರವಾಸಿಕರು ರಿಕ್ಷಾಗಳ ಮೂಲಕವಾಗಲೀ, ಇತರ ವಾಹನಗಳ ಮೂಲಕವಾಗಲಿ ಅಲ್ಲಿಗೆ ನಿರಾಯಾಸವಾಗಿ ಹೋಗಬಹುದು. ವಾಹನ ಸಿಗದಿದ್ದಲ್ಲಿ ಕಾಲ್ನಡೆಯಲ್ಲೇ ಅಲ್ಲಿಗೆ ತಲಪಲು ಹೆಚ್ಚಿನ ಪ್ರಯಾಸವಾಗುವುದಿಲ್ಲ. ಸುಂದರ ವಸತಿ ಗೃಹವೊಂದು ಪ್ರವಾಸಿಕರನ್ನು ಆಮಂತ್ರಿಸುತ್ತದೆ.

ಕೇವಲ ಒಂದೂವರೆ ರೂಪಾಯಿಗಳನ್ನು ಕೊಟ್ಟಲ್ಲಿ ಸಂದರ್ಶಕರು ಎರಡು ಊಟಗಳನ್ನು ಪಡೆಯಬಹುದು. ಊಟ ರುಚಿಯಿರಲೇಬೇಕೆಂದು ಅಪೇಕ್ಷಿಸುವುದು ಸಾಧ್ಯವಿಲ್ಲವಾದರೂ ನಿಮ್ಮಲವಾದುದು. ಸುಂದರ ವಾತಾವರಣದ ಮಧ್ಯದಲ್ಲಿ ಆ ಊಟ ಸರಿಯಾಗಿ ಮೆಚ್ಚುತ್ತದೆ. ಆಶ್ರಮವಾಸಿಗಳೊಡನೆ ಸಾಲಾಗಿ ಕುಳಿತು ಬಾಲಕಿಯರ ಆಪರಿಹ ಕೈಗಳಿಂದ ಬಡಿಸಲಾಗುತ್ತದೆ. ಸಸ್ಯಾಹಾರಿ ಊಟ. ಆದರೆ ಹಲವರೇಶಿಯರು ಇಂದಲ್ಲಿ ಅವರಿಗೆ ಪಸಂತಿಗೃಹದಲ್ಲಿ ಪ್ರತ್ಯೇಕ ಏರ್ಪಾಡು ಇದೆ. ಎಲೆಗಳಲ್ಲಿ ಊಟ ಬಡಿಸಲಾಗುತ್ತದೆ. ಮಣ್ಣಿನ ಪ್ಯಾತ್ರೆಗಳಲ್ಲಿ ನೀರು ಕುಡಿಯಬೇಕು.

ವಿವಿಧ ಕಲೆಗಳಲ್ಲಿ ಶಾಸ್ತ್ರೀಯ ಶಿಕ್ಷಣದ ಏರ್ಪಾಡು ಶಾಂತಿನಿಕೇತನದ ಒಂದು ವೈಶಿಷ್ಟ್ಯ. ಐಚ್ಛಿಕವಾಗಿಯೂ ಗಾಯನವನ್ನು ವಿದ್ಯಾರ್ಥಿಗಳಿಗೆ ಕಲಿಸಲಾಗುತ್ತಿದೆ. ಪ್ರಸ್ತುತ ಸುಮಾರು ೨೫೦ ವಿದ್ಯಾರ್ಥಿಗಳು ಶಾಂತಿನಿಕೇತನದಲ್ಲಿ ಕಲಿಯುತ್ತಿದ್ದಾರೆ. ಹಾಡಿ ಕುಣಿದು ಶಿಕ್ಷಣ ಪಡೆಯುತ್ತಿದ್ದಾರೆ; ಬೆಳೆಯುತ್ತಿದ್ದಾರೆ.

ಪ್ರಾರ್ಥನಾ ಮಂದಿರದಲ್ಲಿ ಎಲ್ಲರೂ ಒಟ್ಟಿಟ್ಟಿಗೆ ಕುಳಿತುಕೊಂಡು ಪರಮಾತ್ಮನ ಧ್ಯಾನದಲ್ಲಿ ತಲ್ಲೀನರಾಗುತ್ತಾರೆ. ಪುಸ್ತಕ ಭಂಡಾರ, ವಸ್ತು ಸಂಗ್ರಹಾಲಯ ಮತ್ತಿತರ ವಿವಿಧ ಖಾತೆಗಳು, ವಸತಿಗೃಹಗಳೇ ಮೊದಲಾದವುಗಳಿದ್ದು ಶಾಂತಿನಿಕೇತನವು ಪ್ರತಿಯೊಂದು ವಿಷಯದಲ್ಲೂ ಸ್ವಾವಲಂಬನ ಹೊಂದಿರುತ್ತದೆ.

ಅಲ್ಲಿಂದ ಒಂದೂವರೆ ಮೈಲು ದೂರದಲ್ಲಿ ಶ್ರೀನಿಕೇತನವಿದೆ. ಅಲ್ಲಿ ಸಣ್ಣ ಸಣ್ಣ ಗುಡಿ ಕೈಗಾರಿಕೆಗಳಲ್ಲಿ ತರಬೇತಿ ಕೊಡಲಾಗುತ್ತಿದೆ. ನೂಲುವುದು ನೇಯುವದು, ಕಾಗದ ತಯಾರಿಸುವುದು, ಮಣ್ಣಿನ ಕೆಲಸ ಮರಗೆಲಸ, ಚರ್ಮದ ಕೈಗಾರಿಕೆಗಳು—ಎಲ್ಲವೂ ಶ್ರೀನಿಕೇತನದಲ್ಲಿ ಕಲಿಸಲ್ಪಡುತ್ತಿದೆ.

ಮಕ್ಕಳನ್ನು ಎಳೆ ಪ್ರಾಯದಿಂದಲೇ ಮುಂದಿನ ಜೀವನಕ್ಕೆ ಬೇಕಾದಂತೆ ತಿದ್ದುವಲ್ಲಿ ಶಾಂತಿನಿಕೇತನದ ಶಿಶುಭವನದ ಮಹತ್ವದ ಹೊಣೆ. ಶಿಶುಭವನದಲ್ಲಿ ಮಕ್ಕಳಿಗೆ ಮಾನಸಿಕ, ಶಾರೀರಕ, ನೈತಿಕ, ವಿದ್ಯಾಭ್ಯಾಸ ಮಾತ್ರವಲ್ಲ ಅವರ ಬೆಳವಣಿಗೆಯಲ್ಲಿ ಆವಶ್ಯಕವೆನಿಸುವ ಪ್ರತಿಯೊಂದು ಅಪ್ಪದವೂ ಇಲ್ಲಿದೆ.

ವರ್ಷಗಳಲ್ಲಿ ಅನೇಕ ಹಬ್ಬಗಳ ಹಾಗೂ ಮುಖ್ಯದಿನಗಳ ಆಚರಣೆಗಳು ಶಾಂತಿನಿಕೇತನದಲ್ಲಿ ಜರಗುತ್ತಲಿದೆ. ಬಂಗಾಳಿ ಹೊಸ ವರ್ಷದ ಆಚರಣೆ, ಠಾಗೋರರ ಜನ್ಮ ದಿನಾಚರಣೆ, ವಸಂತೋತ್ಸವ, ಹಿಮಯಾತು ನೊದಲಾದ ಉತ್ಸವಗಳು ಪ್ರಾಮುಖ್ಯವೆನಿಸಿವೆ. ಮಳೆಗಾಲ ಪ್ರಾರಂಭವಾಗುವಾಗಲೂ ಆವಂದೋತ್ಸವ ಜರಗುತ್ತದೆ. ಪ್ರಕೃತಿಯ ನಿಯಮಗಳನ್ನು ವಿಶೇಷಗಳನ್ನು ಶಾಂತಿನಿಕೇತನದವರು ಚೆನ್ನಾಗಿ ತಿಳಿದಿರುವರು. ಅವರು ನಿಸರ್ಗದ ಸೌಂದರ್ಯವನ್ನು ಹೀರಿದವರು. ಜಗತ್ತಿನ ನಿಯಮಗಳನ್ನು ಪಾಲಿಸುವವರು.

ಈ ಶಾಂತಿನಿಕೇತನದ ಜನ್ಮದಾತರಾದ ಠಾಗೂರರು ಇಂದಿಲ್ಲ. ಆದರೆ ಅವರು ಹಾಕಿ ಕೊಟ್ಟಿರುವ ದಾರಿಯಲ್ಲಿ ಅದು ಸಾಗುತ್ತಿದೆ. ಠಾಗೋರರಂತಹ ವ್ಯಕ್ತಿ ಶ್ರೇಷ್ಠರು ಅಲ್ಲಿಲ್ಲ. ಆದರೆ ಮುನ್ನಡೆಸಲು ಮುಂದಾಳುಗಳಿದ್ದಾರೆ. ಕಾಲಗತಿಯಿಂದ ಕೆಲವು ಅನಾಹುತಗಳು ಬರಬಹುದು ಆದರೆ ಭಾರತಕ್ಕೆ ಶಾಂತಿನಿಕೇತನವು ಅತ್ಯಾವಶ್ಯಕ. ಭಾರತದ ಪುರಾತನ ಸಂಸ್ಕೃತಿಯನ್ನು ಮುಂದಿನ ಪೀಳಿಗೆಯಲ್ಲಿ ಎರಕ ಹೊಯ್ಯಲು ಪಾಶ್ಚಿಮಾತ್ಯ ಪೌರ್ವಾತ್ಯ ಸಂಸ್ಕೃತಿಗಳೆಳೆತನ್ನು ಹೀರಿ ಒಂದಾಗಿ ಬೆರಸಿ ಮೊನವ ಜನಾಂಗದ ಅಭಿವೃದ್ಧಿ ಸಾಧನೆಗೆ ಇಂಥ ಎಸ್ಟೋ ಶಾಂತಿನಿಕೇತನಗಳು ಇನ್ನೂ ಬೇಕಾಗಿವೆ.

"ಪುರಾತನೆ ಕಾಲದಲ್ಲಿ ನಮ್ಮ ದೇಶ ಪಲ್ಲಿದ್ದ ಆರಣ್ಯಾಶ್ರಮಗಳಲ್ಲಿ ವಿದ್ಯಾರ್ಥಿಗಳು ಹೊಂದುತಿದ್ದ ಆತ್ಮಜ್ಞಾನವನ್ನು ಈಗಲೂ ನನ್ನ ಎಳೆಯರು ಪಡೆಯಬೇಕೆಂದು ಈ ಮಾದರಿ ಶಾಲೆಯನ್ನು ನಾವಿಂದು ಏರ್ಪಡಿಸಿದ್ದೇವೆ. ಪರಮಾತ್ಮನು ಆವರ ಹೃದಯಗಳಲ್ಲಿ ನೆಲಸಬೇಕು. ಆವಕ್ಕೆ ತಕ್ಕ ಸ್ಫೂರ್ತಿಯೂ ಬೇಕು" — ಎಂದು ಕವಿ ರವೀಂದ್ರನಾಥ ಠಾಗೋರರು ಒಮ್ಮೆ ಹೇಳಿದ್ದರು.

(ಇಂಗ್ಲಿಷ್ ಲೇಖನದಿಂದ)

—ರಾ (ನವಭಾರತ)

ಶಬ್ದವೂಡುವ ಫೌಂಟನ್ ಪೆನ್

ಪ್ಯಾರಿಸ್ ನಗರದಲ್ಲಿ ಈ ಸಲ ಏರ್ಪಟ್ಟಿರುವ ವಿಶೇಷ ಪ್ರದರ್ಶನದಲ್ಲಿ ಸುಮಾರು ೬೦೦ ವಿಚಿತ್ರ ವಸ್ತುಗಳು ಪ್ರದರ್ಶಿಸಲ್ಪಟ್ಟಿದ್ದು ಅವುಗಳಲ್ಲಿ ಒಂದು ಅಲಾರಂ ಕೂಡುವ ಫೌಂಟನ್ ಪೆನ್.

ಈ ವಿಚಿತ್ರ ಪೆನ್ ಕಿಸೆಯಲ್ಲಿದ್ದಾಗ ಯಾರಾದರೂ ಅದನ್ನು ಅಪಹರಿಸುವ ಸಲುವಾಗಿ ಮುಟ್ಟಿದರೆ ಸಾಕು ಅದು ಕಿರಿಚಿ ಬಿಡುತ್ತದೆ.

ಹೆಂಡತಿ ಸುಂದರಿಯೆಂದು ಅವಳನ್ನು ಕೊಂದೇಬಿಟ್ಟ

ಈರೋಡಿನ ಬಳಿ ಒಂದು ವಿಚಿತ್ರ ಖೂನಿ ನಡೆದಿದೆ. ಒಬ್ಬ ಯುವಕನು ತನ್ನ ಹೆಂಡತಿಯು ಬಹು ಸುಂದರಿಯೆಂದೂ ಅವಳ ಸೌಂದರ್ಯದಿಂದ ಪಾತಿವ್ರತ್ಯ ಕೆಡುತ್ತಿದೆಯೆಂದೂ ತಿಳಿದು ಅವಳನ್ನು ಕೊಂದಿಕ್ಕಿದ ಕಥೆಯೊಂದು ಬಂದಿದೆ.

ಪಳನಿ ಸ್ವಾಮಿ ಗೌಂಡರ್ ಎಂಬ ಯುವಕ ದೇವನ್ ಅಂಗಡಿಯಲ್ಲಿ ಕ್ಲಾರ್ಕನು. ಅವನು ಕಪ್ಪು ಬಣ್ಣದವ ಹಾಗೂ ಕುರೂಪಿ. ಮೂರು ತಿಂಗಳ ಹಿಂದೆ ಅವನಿಗೆ ವಿವಾಹವಾಯಿತು. ಹೆಂಡತಿ ತುಂಬಾ ಚೆಲುವೆ. ಅವಳ ಸೌಂದರ್ಯವನ್ನು ನೋಡಿ ಅವನಿಗೆ ಸಹಿಸಲಾಯಿತು. ಮಾತ್ರವಲ್ಲ ಅವಳ ಪಾತಿವ್ರತ್ಯದ ಮೇಲೂ ಸಂಶಯ ಉಂಟಾಯಿತು.

ಒಂದು ದಿನ ಗಂಡನೂ ಅವನ ತಮ್ಮನೂ ಅವಳನ್ನು ಕೊಡುಮುಡಿ ಎಂಬಲ್ಲಿಗೆ ಕಾವೇರಿ ತೀರ್ಥ ಸ್ನಾನಕ್ಕಾಗಿ ಕರೆದ್ಯ ಕೊಂಡು ಹೋದರು. ಅಲ್ಲಿ ಹೆಂಡತಿ ಸ್ನಾನ ಮಾಡುತ್ತಿದ್ದಾಗ ಗಂಡನೂ ಅವನ ತಮ್ಮನೂ ಅವಳನ್ನು ಜೊರಯಿಂದ ಇರಿದು ನದಿಗೆ ದೂಡಿದರು.

ಈ ಕೊಲೆ ಮಾಡಿ ಅವರು ಅಲ್ಲಿಂದ ಹಿಂದಿರುಗುತ್ತಿದ್ದಾಗ ಕೆಲವರು ಸಂತಸು ಪಟ್ಟು ಅವರೊಡನೆ ಪ್ರಶ್ನೆ ಕೇಳಿದಾಗ ಅವರು ತಬ್ಬಿಬ್ಬಾಗಿ ಪಲಾಯನವೆಸಗಿದರು. ಇಬ್ಬರನ್ನೂ ಬಂಧಿಸಲಾಗಿದೆ.

ಹರಿಜನ ಆಗ್ರಲೇಖ

ಜಾತ್ಯಾತೀತ ಸರಕಾರವೆಂದರೇನು?

ಶ್ರೀ ಹರಪ್ರಸಾದ ವ್ಯಾಸರು ಹೀಗೆ ಬರೆಯುತ್ತಾರೆ:—

"ನಾವು ನಮ್ಮ ರಾಷ್ಟ್ರವನ್ನು ಜಾತ್ಯತೀತ ರಾಜ್ಯವೆಂದು ಸಾರಿದಂದಿನಿಂದ ನಾನಾ ಶಂಕೆಗಳು ಎತ್ತಲ್ಪಡುತ್ತಿವೆ. ಸರಕಾರ ಧಾರ್ಮಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡಬಹುದೆ? ಹಾಗೆ ಕೊಡುವ ಸಂಸ್ಥೆಗಳಿಗೆ ಧನಸಹಾಯ ನೀಡಬಹುದೆ? ಧರ್ಮಕ್ಕೆ ಏನಾದರೂ ಸಂಬಂಧವಿದ್ದ ಆ ಕಾರ್ಯಗಳನ್ನು ಮಾಡಬಹುದೆ, ಬಾರದೆ? ಇತ್ಯಾದಿ. ಪ್ರಸ್ತುತ ಲೇಖನದಲ್ಲಿ ಭಾರತದ ಜಾತ್ಯತೀತ ಸ್ವರೂಪದ ತಾತ್ಪರ್ಯವನ್ನು ವಿಚಾರಿಸುವ ಸವಿನಯ ಪ್ರಯತ್ನವನ್ನು ಮಾಡುವೆ.

ಜಾತ್ಯತೀತ ರಾಜ್ಯವೆಂದರೆ ಭಾರತಕ್ಕೆ ಯಾವುದಾದರೊಂದು ವಿಶಿಷ್ಟ ಸರಕಾರಿ ಧರ್ಮ ಇಲ್ಲೆಂದಿಷ್ಟೇ ತಾತ್ಪರ್ಯವೆಂದು ನನ್ನ ಗ್ರಹಿಕೆ. ಧರ್ಮದ ತಳಹದಿಯ ಮೇಲೆ ಅದು ನಾಗರಿಕ ನಾಗರಿಕರಲ್ಲಿ ಭೇದವೆಣಿಸುವುದಿಲ್ಲ. ಅನೇಕ ಸುಶಿಕ್ಷಿತರು ಭಾವಿಸಿರುವಂತೆ ಜಾತ್ಯತೀತ ರಾಜ್ಯವಾಗಿರುವುದರಿಂದ ಸರಕಾರವು ಧರ್ಮದ ಗೊಡವೆಯನ್ನೇ ಹಚ್ಚಿಕೊಳ್ಳಬಾರದು; ಅದು ಆ ಯಾ ವ್ಯಕ್ತಿಯ ವಿಷಯ; ಆದ್ದರಿಂದ ಆವನೂ ಅವನ ಸಹಧರ್ಮಿಗಳೂ ಸರಕಾರದ ಸಹಾಯ ಅತಂಕಗಳೆರಡೂ ಇಲ್ಲದೆ ತಮ್ಮ ಪಾಡಿಗೆ ತಾವು ನಡೆಸಿಕೊಂಡು ಹೋಗಬೇಕಾದ ವಿಷಯ; ಎಂದು ಅದರ ತಾತ್ಪರ್ಯವಲ್ಲ; ತಾತ್ಪರ್ಯವಿಗಿರಲೂ ಕೂಡದು. ಇದು ನನ್ನ ಅಭಿಪ್ರಾಯ.

ಏಕೆಂದರೆ ರಾಜ್ಯವು ಧರ್ಮದ ಗೊಡವೆಯಿಟ್ಟುಕೊಳ್ಳಬಾರದೆಂಬ ವಾದವು ಧರ್ಮತ್ಯಾಗವೇ ಸರಿ. ಜಾತ್ಯತೀತತೆಗೆ ಇದೇ ತಾತ್ಪರ್ಯವಾದರೆ ಭಾರತದಲ್ಲಿ ಅದು ಎಂದೂ ಯಶಸ್ವಿಯಾಗಲಾರದು. ಅಷ್ಟು ಅಧ್ಯಾತ್ಮಿಕ ದಿವಾಳಿಗಿರಿಯೆನಿಸೀತು. ಧರ್ಮದ ವಿಷಯದಲ್ಲಿ ಗಾಢಶ್ರದ್ಧೆಯುಳ್ಳ ಜನರಿಂದ ತುಂಬಿದ ದೇಶದಲ್ಲಿ ಸರಕಾರವು ಧರ್ಮವನ್ನು ಕಡೆಗಣಿಸಿದರೆ ಅದರಿಂದ ರಾಜ್ಯದ ಜೀವನದ ಮೇಲೆ ಗಂಭೀರ ಪರಿಣಾಮವಾಗದೆ ಬಿಡದು.

ರಾಷ್ಟ್ರದ ಪ್ರಜೆಗಳ ಜೀವನದ ಮಟ್ಟವನ್ನು ಎತ್ತರಿಸುವುದೂ ಯೋಗಕ್ಷೇಮ ಸರಕಾರವನ್ನು ಸ್ಥಾಪಿಸುವುದೂ ರಾಜ್ಯದ ಕರ್ತವ್ಯವಾಗಿದ್ದರೆ ರಾಷ್ಟ್ರಕರಿಗೆ ಧಾರ್ಮಿಕ ಶಿಕ್ಷಣವನ್ನು ಕೊಡಿಸುವುದೂ ಅಷ್ಟೇ ಅವರ ಕರ್ತವ್ಯವಾಗಿದೆ. ಮನುಷ್ಯನು ಅನ್ನವೊಂದರಿಂದಲೇ ಬಾಳುವುದಿಲ್ಲ.

ಗಾಂಧೀಜಿ ಒಂದೆಡೆ ಹೀಗೆ ಹೇಳಿದ್ದಾರೆ:—

"ಮೈಸೂರಿನಲ್ಲಿ ಕೂಡ ವಿದ್ಯಾರ್ಥಿಗಳಿಗೆ ಸರಕಾರಿ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣವಿಲ್ಲದ್ದು ನೋಡಿ ನಾನು ನೊಂದ್ಕೊಂಡಿದ್ದೇನೆ....ಅದರಿ ಭಾರತವು ಆಧ್ಯಾತ್ಮಿಕ ಆಧಃಪಾತಕ್ಕೆ ಹೋಗಬಾರದೆಂದಿದ್ದರೆ ಅದರ ಯುವಕರಿಗೆ ಧಾರ್ಮಿಕ ಶಿಕ್ಷಣ ಕೊಡುವುದು ಲೌಕಿಕ ಶಿಕ್ಷಣದಷ್ಟೇ ಅವಶ್ಯವೆಂದು ಪರಿಗಣಿಸಬೇಕು." (ಹಿಂದೂ ಧರ್ಮ, ಪು. ೨೮೮)

ಧರ್ಮವನ್ನು ಕುರಿತು ಈ ಉದಾಸೀನ ಭಾವ ಸಲ್ಲದೆಂದು ನನಗೆನಿಸುತ್ತದೆ. ಭಾರತದ ಜಾತ್ಯತೀತ ರಾಜ್ಯವು ಧರ್ಮದ ತತ್ತ್ವರಚನಾತ್ಮಕ ಭಾವವನ್ನು ತಳೆಯಬೇಕು. ಭಾರತದ ಜಾತ್ಯತೀತತ್ವವು ಧರ್ಮದ ಬಗ್ಗೆ ಅಸಡ್ಡೆಯಲ್ಲಿ ಅಡಕವಾಗಿರದೆ ಸರ್ವಧರ್ಮ ಸಮಭಾವದಲ್ಲಿ ಅಡಕವಾಗಿದೆಯೆಂದೂ ಸರಕಾರವು ಧರ್ಮದ ವಿಶಿಷ್ಟ ಪಂಥಗಳಿಗೆ ಮಹತ್ವ ಕೊಡದೆ ಅವರ ವಿಶಾಲ ಕಲ್ಪನೆಗೆ ಮಹತ್ವ ಕೊಟ್ಟು ಬೋಧಿಸುವ ಸಂಸ್ಥೆಗಳಿಗೆ ಸಹಾಯ ಮಾಡುವುದೆಂದೂ ಸಾರಬೇಕು. ವಿಶಿಷ್ಟ ಧರ್ಮಾನುಯಾಯಿಗಳಿಗೆ ಮಾತ್ರ ಶಿಕ್ಷಣ ಕೊಡುವ ಸರಸ್ಥೆಗಳಲ್ಲಿಯೂ ಜಾತಿ ಮತ ಭೇದವಿಲ್ಲದೆ ಎಲ್ಲರಿಗೂ ಸಮಾನವಾಗಿ ಧಾರ್ಮಿಕ ಶಿಕ್ಷಣವನ್ನೂ ಇತರ ಸೌಕರ್ಯಗಳನ್ನೂ ಒದಗಿಸುವ ಮತ್ತು ಪರಧರ್ಮಗಳ ಬಗ್ಗೆಯೂ ಆದರವನ್ನು ಹುಟ್ಟಿಸಲು ಯತ್ನಿಸುವ ಸಂಸ್ಥೆಗಳಿಗಷ್ಟೇ ಸರಕಾರವು ಸಹಾಯ ಮತ್ತು ಮಾರ್ಗದರ್ಶನವನ್ನು ಕೊಡಬೇಕು. ಉದಾಹರಣೆಗಾಗಿ ರಾಮಕೃಷ್ಣಾಶ್ರಮ. ಅದೂ ಎಲ್ಲ ಧರ್ಮದವರಿಗೂ ಮುಕ್ತವಾಗಿದೆ. ಸರಕಾರವಷ್ಟೆ ಅಂಥ ಸಂಸ್ಥೆಗಳಿಗೆ ನೆರವು ನೀಡಲು ಏನೂ ಅಕ್ಷೇಪವಿರಬಾರದು. ಅದೇ ಪ್ರಕಾರ ಒಂದು ಮಸೀದಿಯಲ್ಲಿ ಅಥವಾ ಅಂಜುಮಾನದಲ್ಲಿ ಎಲ್ಲರಿಗೂ ಮುಕ್ತದ್ವಾರವಿದ್ದರೆ, ಮತ್ತು ಅಲ್ಲಿ ಬಂದವರಿಗೆ ವಿಸ್ತಿವಾರಾಗಿರಿಂದು ಒತ್ತಾಯ ಮಾಡದೆ ಕುರಾನನ್ನು ಇತರ ಧರ್ಮದ ಮುಖ್ಯ ತತ್ವಗಳ ಸಂಗಡ ಬೋಧಿಸುತ್ತಿದ್ದರೆ ಅದಕ್ಕೂ ಸಹಾಯ ಕೊಡತಕ್ಕದ್ದು. ಅದೇ ಪ್ರಕಾರ ತಮ್ಮ ತಮ್ಮ ಧಾರ್ಮಿಕ ಗ್ರಂಥಗಳನ್ನು ಇತರ ಧರ್ಮಗಳ ಸಾರಪ ಸಂಗಡ ಸಾದರವಾಗಿ ಕಲಿಸುವ ಹಿಂದೂ ಮಂದಿರ, ಕ್ರಿಶ್ಚನ್ ವಿಶನುಗಳಿಗೂ ಸಹಾಯ ಧಲ್ಲಸತಕ್ಕದ್ದು. ಸರಕಾರಿ ಸಹಾಯ ಪೊರೆಯಲು ಮುಖ್ಯ ಉಪಾಧಿಗಳೆಂದರೆ, ಆ ಸಂಸ್ಥೆ ಎಲ್ಲಾಗೂ ತೆರವಾಗಿರಬೇಕು, ಅದು ಇತರ ಧರ್ಮಗಳನ್ನು ತೀರ ಕಡೆಗಣಿಸಬಾರದು. ಅವುಗಳ ಬಗ್ಗೆಯೂ ಆದರವನ್ನು ಬೋಧಿಸುತ್ತ ತನ್ನ ಸ್ವಂತ ಧರ್ಮದ ಬಗ್ಗೆ ವಿಶೇಷ ಲಕ್ಷ್ಯ ಹೊರೈಸಲಡ್ಡಿಯಿಲ್ಲ. ಇಂಥ ಚಟುವಟಿಕೆಗಳನ್ನು ಪ್ರಾರಂಭಿಸುವ ಮೂಲಕ ಸರಕಾರವು ಮೇಲ್ಪಂಕ್ತಿ ಹಾಕಿ ಕೊಟ್ಟರೆ, ಜಾತೀಯ ದ್ವೇಷವು ಕಣ್ಮರೆಯಾಗಿ ವಿವಿಧ ಜಾತಿಗಳಲ್ಲಿ ಪರಸ್ಪರ ಬಾಂಧವ್ಯ ಬೆಳೆಯುವುದು.

ನಮ್ಮೀಕಾಲೀನವಿನವರು ಒಂದು ಶಿಕ್ಷಣ ಕ್ರಮವನ್ನು ಸಿದ್ಧಗೊಳಿಸಿ ಎಲ್ಲರಿಗೂ ಸಮಾನವಾದ ಧಾರ್ಮಿಕ ಶಿಕ್ಷಣ ಕೊಡಲು ಮಾರ್ಗದರ್ಶನ ಮಾಡಬೇಕು. ವಿಶಿಷ್ಟ ಧರ್ಮಪಂಥದ ಸಂಸ್ಥೆಯು ಈ ಕ್ರಮವನ್ನೊಡನೆ ತನ್ನ ಸ್ವಂತ ಪಂಥದ ವಿಶೇಷ ಶಿಕ್ಷಣವನ್ನೂ ಕೊಡಬಹುದು. ಆದರೆ ಹಾಗೆ ಶಿಕ್ಷಣ ಕೊಡುವಾಗ ಇತರ ಧರ್ಮಗಳ ಬಗ್ಗೆ ದ್ವೇಷಭಾವನೆಯನ್ನುಳಿಟು ಮಾಡದಿದ್ದರೆ ಸಾಕು. ಸ್ವಾಭಾವಿಕವಾಗಿ, ಪ್ರತಿಯೊಂದು ಪಾಂಥಿಕ ಶಿಕ್ಷಣವು ಸರಕಾರದಿಂದ ಮನ್ನಣೆ ಪಡೆದ ಕ್ರಮದಲ್ಲೇ ನಡೆಯಬೇಕು.

ಎರಡನೆಯದಾಗಿ, ಜಾತ್ಯತೀತ ಸರಕಾರವು ಹಿಂದೂ ಕಾಯದೆ, ಮುಸ್ಲಿಂ ಕಾಯದೆಗಳಂಥ ವೈಯಕ್ತಿಕ ಕಾಯದೆಗಳನ್ನು ರದ್ದುಗೊಳಿಸಿದಾಕ್ಷಣ ಆ ಸಂಸ್ಥೆಯು ಜಾತ್ಯತೀತತ್ವವನ್ನು ಕಳೆದುಕೊಳ್ಳುವುದಿಲ್ಲ. ಧರ್ಮಮೂಲಕವಾಗಿಯೇ ಜನರನ್ನು ಗುರುತಿಸುವ ಇಂಥ ಕಾಯದೆಗಳನ್ನು ರದ್ದುಗೊಳಿಸುವುದು ಅವರ ಜಾತ್ಯತೀತತ್ವಕ್ಕೆ ಅನುಸಾರವಾಗಿಯೇ ಇದೆ. ವಿವಾಹ, ವಾರಸಾನೆಯಂಥ ವಿಷಯಗಳಲ್ಲಿ ಎಲ್ಲ ನಾಗರಿಕರಿಗೂ ಸಾಮಾನ್ಯವಾದ ಕಾಯದೆಯು ಇರಬೇಕಾದ್ದು ಅವಶ್ಯ.

ಜನರನ್ನು ಅನೈತಿಕ ಆಚರಣೆಗೆ ಪ್ರೇರಿಸಿದರೆ, ಜನರನ್ನು ಹುರ್ಮಾರ್ಗಕ್ಕೆ ಹಚ್ಚಿದರೆ, ಅಥವಾ ಧಾರ್ಮಿಕ ದ್ವೇಷವನ್ನು ಹಬ್ಬಿಸಿದರೆ ಅಂಥ ಧಾರ್ಮಿಕ ಸಂಸ್ಥೆಗಳಲ್ಲಿ ಸೈಹ ಕಲು ಸರಕಾರಕ್ಕೆ ಹಕ್ಕಿರಬೇಕು.

ಸಂಕ್ಷೇಪದಲ್ಲಿ, ಭಾರತದ ಜಾತ್ಯತೀತ ಸರಕಾರವು ಸರ್ವಧರ್ಮ ಸಮಭಾವನವನ್ನೇ ತನ್ನ ಧ್ಯೇಯವಾಗಿ ಮಾಡಿಕೊಂಡು ಯೋಗ್ಯ ಧಾರ್ಮಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ಕೊಡುವುದು ತನ್ನ ಮುಖ್ಯ ಕರ್ತವ್ಯಗಳಲ್ಲಿಂದೆಂದು ಭಾವಿಸಬೇಕು.

ಶ್ರೀ ಹರಪ್ರಸಾದ ವ್ಯಾಸರ ಅಭಿಪ್ರಾಯಗಳಿಗೂ ಡಾ. ರಾಜೇಂದ್ರ ಪ್ರಸಾದರು ವಹಿಸಿದ ನೀತಿಗೂ ನನ್ನ ಪೂರ್ಣ ಸಮ್ಮತಿಯಿದೆ. ಹತ್ತಾರು ಧರ್ಮಗಳೂ ಒಳ ಪಂಥಗಳೂ ಇರುವ ಭಾರತಕ್ಕಂಥ ಪ್ರಜಾತಂತ್ರ ದೇಶದಲ್ಲಿ ಇದೊಂದೇ ವ್ಯಾವಹಾರಿಕ ಉಪಾಯವೆಂದು ನನ್ನ ಮತ. ಸ್ವತಃ ನನ್ನವಿಟ್ಟಿಗೆ ಹೇಳುವುದಾದರೆ ನಾನು ಎಲ್ಲ ಧಾರ್ಮಿಕ ಹಣೆಪಟ್ಟಿಗಳನ್ನೂ ರಾಜಕೀಯ ಅಥವಾ ಸಾಮಾಜಿಕ ಹಣೆಪಟ್ಟಿಗಳಂತೆ ಕಳಚಿ ಒಗೆದೇನು. ಆಪರಿ ಧಾರ್ಮಿಕ ಪ್ರಪಂಚದಲ್ಲಿ ಹಣೆಪಟ್ಟಿಯಿಲ್ಲದ ಧರ್ಮವೂ ಒಂದು ವಿಶಿಷ್ಟ ಹಣೆಪಟ್ಟಿಯೂ ಗಬಹುದು. ಅದರ ಅನೇಕಾನೇಕ ರೋಗಗಳೂ ತಲೆಯೆತ್ತಬಹುದು. ಆದ್ದರಿಂದ ಅವನ್ನೂ ಸಮಾನ ಗೌರವದಿಂದ ಮನ್ನಿಸುವ ಅವಶ್ಯಕತೆ ಉಂಟಾದೀತು.

ಸರ್ವಧರ್ಮಸಮಾನಭಾವವು ಯಾವ ಧರ್ಮದಲ್ಲಿಯಾದರೂ ಸುಧಾರಣೆಗಳನ್ನು ಮಾಡುವುದಕ್ಕಾಗಲಿ ಅದರಲ್ಲಿರುವ ಅಸತ್ಯ ಮತ್ತು ಕೊಳೆಯನ್ನು ನಿವಾರಿಸಲಿಕ್ಕಾಗಲಿ ಅಡ್ಡಿಯಾಗಲಾರದು. ವಿಶ್ವ ಧರ್ಮವೂ ಒಂದು ಧರ್ಮವೇ. ಅದಕ್ಕೂ ಸಮಾನ ಗೌರವ ದೊರೆಯತಕ್ಕದ್ದು. ಕೆಲ ಸುಧಾರಣೆಗಳು ತೀರ ಉಗ್ರವಾಗಿದ್ದು ಅವು ಸರ್ವತ್ರ ಸ್ವೀಕೃತವಾಗಿ ಆ ಧರ್ಮದ ಸ್ವರೂಪವನ್ನೇ ಅಥವಾ ಎಲ್ಲ ಧರ್ಮಗಳ ಸ್ವರೂಪವನ್ನೇ ಕಾಲಾಂತರದಲ್ಲಿ ಪೂರ್ಣವಾಗಿ ಬದಲಾಯಿಸಿಬಿಡಬಹುದು. ಆದರ ಪರಿಣಾಮವಾಗಿ ಕೆಲ ಪ್ರಾಚೀನ ಸಂಸ್ಥೆಗಳು ಅನಾವಶ್ಯವಾಗಿಯೂ ಕಾಲಧರ್ಮವಿರುದ್ಧವಾಗಿಯೂ ಮುಂದುಳಿದಬಹುದು. ಅನಂತರ ಅವು ಗತಕಾಲದ ಐತಿಹಾಸಿಕ ಅವಶೇಷಗಳಾಗಿ ಮೂರ್ಪಡಬಹುದು. ರೋಮನ್, ಗ್ರೀಕ್ ಮತ್ತು ವೈದಿಕದೇವತೆಗಳ ಕಥೆಗಳು ಹೀಗೆಯೇ ಆದವು ಧಾರ್ಮಿಕ ಬದಲಾವಣೆಗಳು ಈ ರೀತಿಯಲ್ಲಿ ಒದಗುವುದೇ ಹಿಂಸಾತ್ಮಕ ಧಾರ್ಮಿಕ ಶಕ್ತಿಗಳಿಂದ ಅಥವಾ ಮೂರ್ತಿ ಭಂಜಕ ಚಳವಳಿಗಳಿಂದ ಉಂಟಾಗುವ ಬದಲಾವಣೆಗಳಿಗಿಂತ ಮೇಲೆಂದು ಹೇಳಬೇಕಾಗಿಲ್ಲ. ಸುಧಾರಣೆಗಳು ಎಷ್ಟೇ ಒಳ್ಳೆಯವೂ ಆಗಿದ್ದರೂ ಅವುಗಳನ್ನು ಹಿಂಸಾತ್ಮಕ ಹೇರಿದಾಗ ಪ್ರಾಚೀನ ಅವು ಪದ್ಧತಿಯು ಪುನರುಜ್ಜೀವನ ಮತ್ತು ಪ್ರತಿಗಾಮಿ ಚಳವಳಿಯಲ್ಲಿ ಪರಿಣಮಿಸುವುದಂಟು. ಅರಬಸ್ತಾನದ ಪ್ರತಿಯೊಬ್ಬ ಅರಬನೂ, ಇಸ್ಲಾಮು ಧರ್ಮವನ್ನು ಅಂಗೀಕರಿಸಿದ ನಂತರ ಮಹಮ್ಮದನು ಮಕ್ಕಾ ಮಸೀದಿಯಲ್ಲಿದ್ದ ಎಲ್ಲ ಮೂರ್ತಿಗಳನ್ನು ಧ್ವಂಸ ಗೊಳಿಸಿದನು. ಅವುಗಳನ್ನು ಪುನಃ ಸ್ಥಾಪಿಸಲು ಯಾರೂ ಪ್ರಯತ್ನಿಸಲಿಲ್ಲ ನಿಜ. ಆದರೆ ಮಹಮ್ಮದನು ಕಾಬಾವನ್ನು ಮೂರ್ತಿ ಕಿತ್ತೊಗೆಯಲಿಲ್ಲವೆಂಬುದನ್ನು ನಾವು ಮರೆಯಕೂಡದು. ಅವರಲ್ಲಿ ಜನರಿಗಿದ್ದ ಶ್ರದ್ಧಾವಿಷ್ಟೆಗಳನ್ನು ಅವರು ಕಡೆಗಣಿಸುತ್ತಿರಲಿಲ್ಲ ಅವನು ತರ್ಕಬದ್ಧನಾಗಿದ್ದಿಲ್ಲವಾದರೂ ಅವನು ಅವನನ್ನು ಮನ್ನಿಸಿ ಪ್ರಜ್ಞಾಭಿಪ್ರಾಯಕ್ಕೆ ತಲೆವಾಗಿದಂತಾಯಿತು. ಅದರಿ ಅವನ ಧರ್ಮಾಧಿಕಾರಿಯಾಯಿಗಳು ಇಸ್ಲಾಮಿಕ್ಕೆ ಮತಾಂತರ ಹೊಂದಿದ ಜನರ ಗುತ್ತಿಗೆಂಡಾರಗಳನ್ನು ಖಡ್ಗಬಲದಿಂದ ನಿರ್ನಾಮ ಮಾಡಹೋದರು. ಆದ್ದರಿಂದಲೇ ಅನುಕೂಲ ಕಾಲ ಒದಗಿದಾಗ ಹಳೆಯ ಮೂರ್ತಿಗಳನ್ನು ಪುನಃ ಸ್ಥಾಪಿಸುವ ಬಯಕೆಯು ಪರಾಜಿತ ಜನರ ಹೃದಯದಲ್ಲಿ ಒಳಗೊಳಗೇ ಜಾಗೃತವಾಗಿದ್ದು ಪೀಳಿಗೆಯಿಂದ ಪೀಳಿಗೆಗೆ ಇಳಿದು ಬಂತು. ಬೇಸಗೆಯಲ್ಲಿ ಅವ್ಯಕ್ತವಾಗಿ ಹುದುಗಿದ್ದು ಮಳೆಗಾಲ ಬಂದೊಡನೇ ಎಲ್ಲೆಲ್ಲಿಯೂ ಮೊಳಕೆಯೊಡೆದು ತಲೆಯೆತ್ತುವ ಬೀಜಗಳಂತೆ, ಈ ಹಂಬಲ ರಾಜಕೀಯ ದಾಸ್ಯ ವಿಮೋಚನೆಯೊಡನೆ ಒಮ್ಮೆಲೇ ರಭಸದಿಂದ ತಲೆಯೆತ್ತಿತು. ಈಗ ನಾವು ಇಂಥದೊಂದು ಅವಸ್ಥೆಯಲ್ಲಿದ್ದೇವೆ. ನಮ್ಮ ಮನಸ್ಸು ಅದರ ಪರಿಣಾಮವಾಗಿ ತುಸು ತೂಕ ತಪ್ಪಿದೆ. ನಮ್ಮಲ್ಲಿ ಆ ಸಂಸ್ಥೆಗಳ ಬಗ್ಗೆ ವಿಶೇಷ ಶ್ರದ್ಧೆ ಉಳಿದಿಲ್ಲವಾದರೂ ಅವುಗಳನ್ನು ಪುನರುಜ್ಜೀವಿಸುವ ಹಟ ನಮ್ಮಲ್ಲಿ ಉಂಟಾಗಿದೆ. ಸ್ವಲ್ಪ ಕಾಲ ಕಳೆದರೆ ನಮಗೆ ಅವುಗಳ ಮೇಲೆ ಬೇಸರ ಬಂದು ಅವನ್ನು ನಾವು ಉಪೇಕ್ಷೆಯಿಂದ ದೂರ ಸರಿಸಿಬಿಡಬಹುದು. ಹಾಗಾಗುವುದೇ ಶ್ರೇಯಸ್ಸು. ಆದರಿಂದ ಎಷ್ಟೋ ಧನಹಾನಿ, ಕ್ರಮಹಾನಿಯಾಗುವುದೇನೋ ನಿಜ. ಆದರೆ ಅದಕ್ಕೆ ಉಪಾಯವಿಲ್ಲ. ಸುಧಾರಕನು ಇದರಿಂದ ಹತಾಶನಾಗಬೇಕಾಗಿಲ್ಲ. ಅವನು ಪ್ರಚುರಪಡಿಸಬೇಕೆಂದಿರುವ ಸುಧಾರಣೆಗಳಲ್ಲಿ ನಿಜವಾಗಿ ತಿರುಳಿದ್ದರೆ ಪುನರುಜ್ಜೀವನದ ಹುರುಪು ಸ್ವಲ್ಪ ಕಾಲದಲ್ಲೇ ತಣಿದು ಅವನಿಗೆ ಮೇಲ್ಗೈ ಯಾಗುವುದು ಖಂಡಿತ.

—ಕೆ. ಫೆ. ನರಿಮನ್ವಾಲಾ

———

ಭವಿಷ್ಯತ್ತಿನ ನಿರ್ಣಯ ಜನರ ಕೈಯಲ್ಲಿದೆ

"ಪ್ರಾಂತ ಚಿಕ್ಕದಾದಷ್ಟೂ ಆಡಳಿತ ದಕ್ಷತೆ ಹೆಚ್ಚು"

—ರಾಜಗೋಪಾಲಾಚಾರಿ.

"ಭವಿಷ್ಯ ನಿರ್ಣಯಿಸುವಾಗ ಸಂಬಂಧಿಸಿದ ಜನರ ಅಭಿಪ್ರಾಯ ಕೇಳಬೇಕೆಂಬ ಸೂಚನೆಯನ್ನು ಒಪ್ಪುತ್ತೇನೆ"

—ಗೋಪಾಲಸ್ವಾಮಿ ಐಯ್ಯಂಗಾರ್.

ಶಾರೀಕು ೨೬ರಲ್ಲಿ ಕೇಂದ್ರ ಪಾರ್ಲಿಮೆಂಟಿನಲ್ಲಿ ಚೀಫ್ ಕಮಿಷನರ್ ಪ್ರಾಂತಗಳ ಸುಧಾರಣಾ ಮಸೂದೆಯ ಬಂದಾಗ ಅದನ್ನು ಒಂದು ಸಿಲೆಕ್ಟ್ ಕಮಿಟಿಗೆ ಬಿಡಬೇಕೆಂದು ಕೆಪ್ಟನ್ ಅವದೇಶ ಸಿಂಗರು ಒಂದು ಸೂಚನೆಯನ್ನು ತಂದರು. ಆ ಕಾಲಕ್ಕೆ ಮಸೂದೆಯ ಮೇಲೆ ನಡೆದ ಚರ್ಚೆಯ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ಪ್ರೊ|| ಕೆ. ಟಿ. ಶಾ.

ಈ ಮಸೂದೆಯ ವಿಚಾರ ಶಾರವರು ಮಾತಾಡುತ್ತಾ, 'ಈ ಮಸೂದೆಯು ಚೀಫ್ ಕಮಿಷನರ್ ಪ್ರಾಂತಗಳಲ್ಲಿ-ಪ್ರಜಾಜವಾಬ್ದಾರಿಯ ಸರಕಾರಗಳನ್ನು ಸ್ಥಾಪಿಸುವದನ್ನು ಬದಿಗೊತ್ತುವದರಿಂದ ಖಂಡನಾರ್ಹವಾಗಿದೆ. ತಪ್ಪು ಮಾಡದೆ ಯಾರೂ ಸ್ವ ಆಡಳಿತದ ಅನುಭವವನ್ನು ಪಡೆದಿಲ್ಲ. ಈ ಪ್ರಾಂತಗಳ ಆಡಳಿತ ಸರಿಯಿಲ್ಲವೆನ್ನುವದು ನಿಜವಿರಬಹುದಾದರೂ ಅದಕ್ಕಾಗಿ ಅವರಿಗೆ ಜವಾಬ್ದಾರಿ ಸರಕಾರ ಕೊಡದಿರುವುದು ಯೋಗ್ಯವಲ್ಲ. ಈ ದೃಷ್ಟಿಯಿಂದ ಕೇಂದ್ರದಲ್ಲಿ ಜವಾಬ್ದಾರಿ ಹೊತ್ತವರೂ ಕೂಡ ತಾವು ಕರ್ತವ್ಯದಲ್ಲಿ ಚ್ಯುತಿ ಮಾಡಿಲ್ಲ; ಮಾಡಲಾರೆವೆಂದು ಹೇಳಲಾಗುವದಿಲ್ಲ. ರಾಷ್ಟ್ರದ ಐಕ್ಯತೆ ಮತ್ತು ಅಖಂಡತೆಯ ದೃಷ್ಟಿಯನ್ನಿಟ್ಟು ಈ ಭಾಗಗಳಲ್ಲಿ ಪ್ರಜಾಸತ್ತಾತ್ಮಕ ಸರಕಾರಕ್ಕಿರುವ ಅಡಚಣೆಗಳನ್ನೆಲ್ಲಾ ನಿವಾರಿಸಬೇಕು. ಈ 'ಸಿ' ಭಾಗದ ಯಾವದೇ ಸಂಸ್ಥಾನವನ್ನು ಹತ್ತಿರದ ಬೇರೆ ಪ್ರಾಂತದೊಡನೆ ವಿಲೀನೀಕರಿಸುವ ಅವಶ್ಯಕತೆ ತೋರಿಬಾರದಾಗ ಅಂಥಾ ವಿಲೀನೀಕರಣಕ್ಕೆ ಮೊದಲು ಆ ಭಾಗದ ಜನರ ಅಭಿಪ್ರಾಯವನ್ನು ತೆಗೆದು ಅದರಂತೆ ವರ್ತಿಸಬೇಕು.

ಪಂಡಿತ ಮುಕುಟ ಬಿಹಾರಿಲಾಲ್ ಭಾರ್ಗವ.

ಈ ಮಸೂದೆಯು ಪ್ರತಿಗಾಮಿಯಾಗಿದೆ. ಇದರಿಂದ ಹಳೇ ಆಡಳಿತ ಪದ್ಧತಿಯೇ ಈ ಭಾಗಗಳಲ್ಲಾಳಿದು ಜವಾಬ್ದಾರಿ ಸರಕಾರದ ಹಕ್ಕು ದೂರ ಉಳಿದಂತಾಗುವದು. ಚೀಫ್ ಕಮಿಷನರ್ ಪ್ರಾಂತಗಳ ಬಗ್ಗೆ ಕೇಂದ್ರ ಸರಕಾರದ ಮತ್ತು ಸಂಸ್ಥಾನ ವಿಭಾಗದ ಮಂತ್ರಿಗಳ ಧೋರಣೆಯು ಪ್ರಜಾ ಸತ್ತಾತ್ಮಕವಾಗಿರದೆ ಅಧಿಕಾರಶಾಹಿಯದಾಗಿದೆಯೆಂದು ಸ್ಪಷ್ಟ ಹೇಳ ಬಯಸುತ್ತೇನೆ ಈ ಮಸೂದೆಯು ಈ ಭಾಗದ ಜನರಿಗೆ ಯಾವುದೇ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಸಮಾನತೆಯನ್ನು ನಮ್ಮ ರಾಜ್ಯಘಟನೆಯಲ್ಲಿ ಸ್ಪಷ್ಟ ಪಡಿಸಿರುವಂತೆ, ಕೊಡುವ ಹಾಗಿಲ್ಲ ಅಜಮೀರಿನಂಥಾ ಪ್ರಾಂತವು ಶತಮಾನಗಳ ನಿರಕುಂಶ ಆಡಳಿತದಲ್ಲಿ ಕೊಳೆಯುತ್ತಿದೆ. ಅಜಮೀರವು ಮುಸ್ಲಿಂ ಆಡಳಿತ ಮತ್ತು ನಂತರ ಬ್ರಿಟಿಷರ ಆಡಳಿತದಲ್ಲೂ ಪ್ರತ್ಯೇಕವಿದ್ದುದು ಸಾಮ್ರಾಜ್ಯಶಾಹೀ ಆಡಳಿತದ ದೃಷ್ಟಿಯಿಂದ ಎಂದು ಹೇಳಲಾಗುತಿತ್ತು. ಅದೇ ಮಾತನ್ನು ಇಂದಿನ ಆಡಳಿತಗಾರರೂ ಹೇಳುತ್ತಾ ಅಜಮೀರಕ್ಕೆ ಜವಾಬ್ದಾರಿ ಸರಕಾರವನ್ನು ನಿರಾಕರಿಸುತ್ತಿದ್ದಾರೆ.

ಚೀಫ್ ಕಮಿಷನರ ಕೈಕೆಳಗೆ ಕೌನ್ಸಿಲರುಗಳ ನೇಮಕವು ಕೇವಲ ಕಣ್ಣುಕಟ್ಟೆ

ನ ವ್ಯಾಪಾರ. ನಮ್ಮ ರಾಜ್ಯಘಟನೆಯ ಪ್ರಕಾರ ಈ ಚೀಫ್ ಕಮಿಷನರ ಕೌನ್ಸಿಲು ನ್ಯಾಯ ಸಮ್ಮತ ಸಭೆಯೂಗಲಾರದು. ಮೇಲಾಗಿ ಈ ಕೌನ್ಸಿಲರುಗಳು ಯಾವ ರೀತಿ ಕೆಲಸ ಮಾಡುವರೆಂಬುದೂ ಮಸೂದೆಯಲ್ಲಿ ಸ್ಪಷ್ಟವಾಗಿಲ್ಲ. ಈ ಕೌನ್ಸಿಲುಗಳನ್ನು ವಿಸ್ತರಿಸಿ ಎರಡು ಮೂರರ ಬದಲು ಹತ್ತು ಹದಿನೈದು ಸದಸ್ಯರುಗಳನ್ನು ಮಾಡಬಹುದು. ಚೀಫ್ ಕಮಿಷನರು ಈ ಸದಸ್ಯರಿಗೆ ಜವಾಬ್ದಾರನಾಗಿರುವಂತೆ ಮಾಡಬೇಕು. ಕೌನ್ಸಿಲ್ ಆಫ್ ಸ್ಟೇಟಿಗೆ ಸದಸ್ಯನನ್ನು ಆರಿಸಲು ಮೂವತ್ತು ಜನರಿಂದ ಕೂಡಿದ ಒಂದು ಇಲೆಕ್ಟರಲ್ ಕಾಲೇಜನ್ನು ಆರಿಸುವದು ಸೂಕ್ತವಾಗಿದೆ.

ಥಾಕೂರ್‌ಲಾಲ್ ಸಿಂಗ್

ಈ ಮಸೂದೆಯು ವನಸ್ಪತಿ ತುಪ್ಪದಂತಿದೆ. ಬೋಪಾಲಿನ ಜನರು ಜವಾಬ್ದಾರಿ ಸರಕಾರಕ್ಕಾಗಿ ಅನೇಕ ವರ್ಷಗಳಿಂದ ಹೋರಾಡುತ್ತಿದ್ದಾರೆ. ಈ ರೀತಿ ಜವಾಬ್ದಾರಿ ಸರಕಾರಕ್ಕಾಗಿ ಹೋರಾಡುತ್ತಿರುವ ಜನರಿಗೆ ಈ ಮಸೂದೆಯು ಕೇವಲ ತೋರಿಕೆಯದು. ಈ ಸಂಸ್ಥಾಧಿಕ್ಕೆ ಪ್ರಜಾಜವಾಬ್ದಾರಿ ಸರಕಾರ ಕೊಡಲಾರದಿದ್ದರೆ ಇದನ್ನು ಬೇರೆ ಪ್ರಾಂತದೊಡನೆ ವಿಲೀನಗೊಳಿಸುವದು ಹಿತವಾಗಿದೆ. ನಾನು ಕಾಂಗ್ರೆಸ್ಸಿನವನಾದ್ದರಿಂದ ಕಾಂಗ್ರೆಸ್ಸಿನ ಶಿಸ್ತನ್ನು ಪಾಲಿಸಬೇಕಾಗಿದೆ. ಇಲ್ಲದಿದ್ದರೆ ಬೋಪಾಲಕ್ಕೆ ಪ್ರಜಾಜವಾಬ್ದಾರಿ ಸರಕಾರಬೇಕೆಂದು ಸತ್ಯಾಗ್ರಹ ಮಾಡುತ್ತಿದ್ದೆ. ಪ್ರಜಾಜವಾಬ್ದಾರಿ ಸರಕಾರ ದೊರೆಯುವ ವರೆಗೆ ಅಲ್ಲಿರುವ ಚೀಫ್ ಕಮಿಷನರ ಆಡಳಿತವೇ ಸಾಕಾಗಿದೆ!

ಗೃಹ ಮಂತ್ರಿ ರಾಜಗೋಪಾಲಾಚಾರಿ

ಚರ್ಚೆಯ ಮಧ್ಯದಲ್ಲಿ ಮಾತಾಡುತ್ತಾ ರಾಜಗೋಪಾಲಾಚಾರಿಯವರು ಹೀಗೆಂದರು:—

'ಪ್ರಜಾಪ್ರಭುತ್ವದಲ್ಲೂ ಅಧಿಕಾರಿಯೊಬ್ಬನು ಚಲಾಯಿಸಬಹುದಾದ ಅಧಿಕಾರವು ಸರ್ವಾಧಿಕಾರ ಸರಕಾರಕ್ಕಿಂಥಾ ಕಡಿಮೆಯಲ್ಲ. ಉದಾಹರಣೆಗೆ ಕೆಲವು ವರ್ಷಗಳ ಹಿಂದೆ ನಾನು ಪಾಂಡಿಚೇರಿಗೆ ಹೋಗಿದ್ದಾಗ ಅಲ್ಲಿಯ ಒಬ್ಬ ಪೊಲೀಸಿನವನಿಗೆ ಬೇರೆ ಕಡೆಗಳಲ್ಲಿರುವವನಿಗಿಂಥಾ ಅಧಿಕಾರವಿರುವದು ಕಂಡು ಬಂತು. ಚೀಫ್ ಕಮಿಷನರ್ ಪ್ರಾಂತಗಳನ್ನು ದಳಿತ ವರ್ಗದವರಂತೆ ಕಾಣಲಾಗುತ್ತಿದೆಯೆಂಬ ಥಾಕೂರ್‌ಲಾಲ್ ಸಿಂಗರ ಮಾತನ್ನು ಖಂಡಿಸಬೇಕಾಗಿದೆ. 'ಸಿ, ಭಾಗದ ಪ್ರಾಂತಗಳಿಗೆ ಅವುಗಳದೇ ಆದ ಪ್ರತ್ಯೇಕ ಚರಿತ್ರೆ ಇದ್ದು ಅವು ಎ ಮತ್ತು ಬಿ ಭಾಗದ ಪ್ರಾಂತಗಳಿಗೆ ಭಿನ್ನವಾಗಿರುವವಲ್ಲದೆ ಅವುಗಳೊಳಗೂ ಭಿನ್ನತೆ ಇದೆ. ವಿಲೀನಗೊಳಿಸಲ್ಪಡಬೇಕೆಂದು ಎಲ್ಲರೂ ಹೇಳುವ ಕೆಲವು ಸಂಸ್ಥಾನಗಳೂ ಇವೆ. ಆಜರೆ ಕೆಲವು ಸಂಸ್ಥಾನಗಳ ಕಷ್ಟತಮ ಸ್ಥಿತಿಯು ಅವುಗಳನ್ನು ಪ್ರತ್ಯೇಕವಿಟ್ಟು ಕೇಂದ್ರದ ಹಿಡಿತದಲ್ಲಿಟ್ಟುಕೊಳ್ಳುವಂತೆ ಪ್ರೇರಿಪಿಸುತ್ತದೆ. ಬಹುಮತದ 'ಸಿ' ಸಂಸ್ಥಾನಗಳು ಆಳರಸರ ಆಡಳಿತದಿಂದ ಈಗ ಬಿಡುಗಡೆ ಹೊಂದಿದವು. 'ಎ' ಭಾಗದ ಸಂಸ್ಥಾನಗಳಿಗೆ ಶಾಸನ ಸಭೆ, ಬಜೆಟ್ ಮೊದಲಾದುವು ಬಹು ಕಾಲದಿಂದಲೇ ಇವೆ 'ಸಿ' ಭಾಗದ ಸಂಸ್ಥಾನಗಳಲ್ಲಿ ಅಂಥಾ ಅನುಭವವಿಲ್ಲ. ಕೆಲವಕ್ಕೆ ರಾಜ ಪ್ರಮುಖ ಮೊದಲಾದ ಶಿಲ್ಲ. ಇಂದಿನ ಸ್ಥಿತಿಯೇ ಅಲ್ಲಿ ಮುಂದರಿಯಬೇಕೆಂಬ ಇಚ್ಛೆಯೂರಿಗೂ ಇಲ್ಲದಿದ್ದರೂ ಬೇರೆ ಉಪಾಯವಿಲ್ಲ. ಈ ಮಸೂದೆಯ ಪ್ರಕಾರ ಈ ಸಂಸ್ಥಾನಗಳು ಎ. ಬಿ. ಭಾಗಗಳಂಥಾ ಉತ್ತಮವಾಗಿ ಆಳಲ್ಪಡುವವೆಂದು ನನಗೆ ನಿಸುತ್ತದೆ. ಸಂಸ್ಥಾನವು ಚಿಕ್ಕದಾದಷ್ಟು ಆಡಳಿತವು ದಕ್ಷವಾಗುತ್ತದೆ. ನನ್ನ ವ್ಯಕ್ತಿಗತ ಅಭಿಪ್ರಾಯವನ್ನು ಹೇಳುವದಾದರೆದೊಡ್ಡದಾಗಿರುವ ಎ. ಮತ್ತು ಬಿ. ಸಂಸ್ಥಾನಗಳನ್ನೂಕೂಡ 'ಸಿ' ಸಂಸ್ಥಾನಗಳಂತೆ ಚಿಕ್ಕ ಆಡಳಿತ ಘಟಕಗಳಾಗಿ ಮಾಡುವದು ಸೂಕ್ತ. ನಾವು ಅದಕ್ಕೆ ಯಾವುಹೇ ಹೆಸರನ್ನು ಕೊಟ್ಟರೂ ಜನತೆಯ ಸಂಪರ್ಕವು ಆಡಳಿತಗಾರರಿಗೆ ಇದರಿಂದ ಹೆಚ್ಚು ಹೊರೆಯುವದು.

ಪಾರ್ಲಿಮೆಂಟಿನ ಸದಸ್ಯರ ದೃಷ್ಟಿಯು ಬೇರೆ ವಿಚಾರಗಳಿಗಾಗಿ ಅತ್ತ ಕೇಂದ್ರೀಕರಿಸಲ್ಪಟ್ಟು 'ಸಿ' ಸಂಸ್ಥಾನಗಳ ಬಗ್ಗೆ ಗಮನ ಕಡಿಮೆಯಾಗಿರುವಾಗ ಈ ವಿಚಾರ ಪಾರ್ಲಿಮೆಂಟಿನಲ್ಲಿ ವಿವೇಚಿಸಿ ಪ್ರಯೋಜನವಿಲ್ಲವೆಂಬ ಲಾಲ್ ಸಿಂಗರ ಅಭಿಪ್ರಾಯ ಸರಿಯಲ್ಲ. ಈಗಿನ ಏರ್ಪಾಡು ಪರಿಶೋಧನಾತ್ಮಕವಾದುದು. ಈ ಮಸೂದೆಯನ್ನು ಮುಂದಿಟ್ಟ ಶ್ರೀ. ಎನ್. ಗೋಪಾಲಸ್ವಾಮಿ ಐಯ್ಯಂಗಾರರು ಎಲೆಕ್ಟರಲ್ ಕಾಲೇಜ್ ಏರ್ಪಡಿಸುವ ಶ್ರೀ. ಭಾರ್ಗವರ ಸೂಚನೆಯನ್ನು ಚಿತ್ತಕ್ಕೆ ತೆಗೆದುಕೊಳ್ಳುವರೆಂದು ನಂಬುತ್ತೇನೆ. ಇದಾದರೆ ಸಿ. ಭಾಗದ ಸಂಸ್ಥಾನಗಳಲ್ಲಿ ಒಂದು ಪೂರ್ಣ ಯೋಜನೆಯು ತಯಾರಾದಂತಾಗುವದು. ಚೀಫ್ ಕಮಿಷನರಿಗೆ ಯಾವುದೇ ಹೆಸರು ಕೊಟ್ಟರೂ ಆಪರಾ ಆಡಳಿತದ ಮುಖ್ಯಸ್ಥರಾಗಿದ್ದು ಪ್ರಜಾಪ್ರಭುತ್ವದಲ್ಲೂ ಕೂಡ ಅವರ ಗೌರವವನ್ನು ಕಾಪಾಡುವದರಿಂದ ಆಡಳಿತಕ್ಕೆ ಉಪಯೋಗವೇ ಆಗುವದು ಸದಸ್ಯರಾಗಲೀ, ಮಂತ್ರಿಗಳಾಗಲೀ ಆಡಳಿತ ಮುಖ್ಯಸ್ಥರ ಕೆಲಸದಲ್ಲಿ ಕೈಹಾಕಬಾರದು. ಅವರು ಚೀಫ್ ಕಮಿಷನರಲ್ಲಿಗೆ ಹೋಗಿ ಆ ಅಧಿಕಾರಿಯು ಇಲ್ಲವೇ, ಈ ಉದ್ಯೋಗಸ್ಥರ ವರ್ಗಾವರ್ಗಿಗೆ ಯತ್ನಿಸಬಾರದು ಮಂತ್ರಿಗಳು ಧೋರಣೆಗೆ ಜವಾಬ್ದಾರರೇ ವಿನಾ ಅಂತರ್ಯ ಆಡಳಿತಕ್ಕಲ್ಲ. ಭಾರ್ಗವರವರ ಅಭಿಪ್ರಾಯವನ್ನು ತೆಗೆದುಕೊಂಡರೆ ಈ ಭಾಗಗಳಲ್ಲಿ ಒಂದು ವಿಧದ ಶಾಸನ ಸಭೆಯೂ ದಂತಾಗುವದು. ಅಲ್ಲಿ ಸದಸ್ಯರು ಚರ್ಚಿಸಿ ಯೋಗ್ಯ ಕೆಲಸ ಮಾಡಬಹುದು. ಈ ಮಸೂದೆಯು ಪರಿಪೂರ್ಣವಲ್ಲ. ಬೇಕಾದ ತಿದ್ದು ಪಡಿಯನ್ನು ಕ್ರಮಶಃ ಮಾಡಿಕೊಳ್ಳಬಹುದು. 'ಸಿ' ಸಂಸ್ಥಾನಗಳಿಗೆ ಎ., ಬಿ. ಸಂಸ್ಥಾನಗಳಂತೆ ಕಟ್ಟು ನಿಟ್ಟಾದ ನಿಶ್ಚಿತ ನಿಯಮಾವಳಿ ಇಲ್ಲದುದೇ ಅವುಗಳ ಹಿರಿಮೆ. ಈ ಭಾಗಗಳ ಆಡಳಿತದಲ್ಲಿ ಯುಕ್ತ ತೋರಿದ ಬದಲಾವಣೆ ಮಾಡಲು ಪ್ರೆಸಿಡೆಂಟರನ್ನು ತಡೆಯುವ ಯಾವದೇ ಆತಂಕಗಳಿಲ್ಲ. ಈ ಸಂಸ್ಥಾನಗಳ ಆರ್ಥಿಕ ಸ್ಥಿತಿಯು ಚೆನ್ನಾಗಿರದೆ ೫೦೦ ಲಕ್ಷ ರೂಪಾಯಿಯ ಖೋತಾ ಇದೆ. ಇವುಗಳಿಂದ ಕೇಂದ್ರಕ್ಕೆ ಆದಾಯ ತೆರಿಗೆಯಿಂದ ಬರುವ ಉತ್ಪತ್ತಿ ೪೦ ಲಕ್ಷವಾಗಿದೆ. ಈ ವರೆಗೆ ಕೆಲವು ಸಂಸ್ಥಾನಗಳಿಗೆ ಬಜೆಟ್ಟು ಇರಲಿಲ್ಲ; ಆಡಳಿತದ ಬೇರೆ ಯಾವ ಅನುಭವವೂ ಇಲ್ಲ.

ಅಜಮೀರದ ವಿಚಾರ ಮಾತಾಡುತ್ತಾ, ಅದರ ಭವಿಷ್ಯವೇನೆಂದು ಜೋತಿಷ್ಯಕ್ಕೆ ನೂ ಕೂಡ ಹೇಳಲಾಠನು. ಅದು ಚಿಕ್ಕದೊಂದು ದ್ವೀಪದಂತಿದ್ದು ಅದು ಗವರ್ನರು, ಮಂತ್ರಿಗಳನ್ನಿಟ್ಟುಕೊಂಡು ಆಡಳಿತ ನಡೆಸಲಾರದು ಎಂದೆಣಿ.

ಮಧ್ಯೆ ಬಾಯಿ ಹಾಕಿ ಶ್ರೀ. ಗುಪ್ತರವರು ಅಜಮೀರದ ಜನರು ಅದನ್ನು ರಾಜಸ್ಥಾನದೊಡನೆ ವಿಲೀನಗೊಳಿಸಬೇಕೆಂದರೂ ಸರಕಾರ ಹಾಗೆ ಮಾಡದಿರಲು ಕಾರಣವೇನೆಂದು ಕೇಳಲು ಅಜಮೀರದ ಬಹು ಜನರು ವಿಲೀನೀಕರಣಕ್ಕೆ ವಿರೋಧವಿರುವರೆಂದು ರಾಜಗೋಪಾಲಾಚಾರಿಯವರೆಂದರು. ಶ್ರೀ. ಭಾರ್ಗವರವರು ಅಜಮೀರದ ಭವಿಷ್ಯ ನಿರ್ಣಯಮಾಡುವ ಚಿತ್ತಕ್ಕನ್ನು ಅಲ್ಲಿ ರಚಿತವಾಗುವ ಇಲೆಕ್ಟರಲ್ ಕಾಲೇಜಿಗೆ ಬಿಡಬೇಕೆಂದರು.

ಶ್ರೀ. ಗೋಪಾಲಸ್ವಾಮಿ ಐಯ್ಯಂಗಾರ್

ಸಂಸ್ಥಾನಗಳ ಮಂತ್ರಿಗಳಾದ ಶ್ರೀ. ಗೋಪಾಲಸ್ವಾಮಿಯವರು ಉತ್ತರವಾಗಿ ಈ ರೀತಿ ಹೇಳಿದರು.

'ಎ. ಬಿ ಮತ್ತು ಸಿ ಸಂಸ್ಥಾನಗಳಿಗಿರುವ ಭಿನ್ನ ಬೇಧವನ್ನು ಶೀಘ್ರ ತೆಗೆದು ಹಾಕಿದಷ್ಟೂ ಉತ್ತಮವೆಂದು ಅನೇಕರು ಹೇಳಿದರು. ಈ ಸಂಸ್ಥಾನಗಳಲ್ಲಿ ಪರಸ್ಪರ ಬೇಧವಿದೆ. ಹಿಂದೆ ಕೇಂದ್ರದಿಂದ ಆಳಲ್ಪಡುವ ಮೂರೇ ಚೀಫ್ ಕಮಿಷನರ ಪ್ರಾಂತಗಳಿದ್ದವು. ಈಗ ಹತ್ತು ಇವೆ. ಹೀಗೆ ಅವುಗಳ ಸಂಖ್ಯೆ ಹೆಚ್ಚಿಸಲು ದೃಢ ಕಾರಣಗಳಿವೆ.

ಮಣಿಪುರ, ತ್ರಿಪುರ ಮತ್ತು ಕಚ್ ಈ ಸಂಸ್ಥಾನಗಳ ಬಗ್ಗೆ ಅವು ಗಡಿಗಳಲ್ಲಿ

(ಉಳಿದ ಪುಠಕ್ಕೆ ಸಾಗಿದೆ)

ಕೊ ಡ ಗು

ತಾ. ೧-೬-೧೯೫೧ನೇ ಶುಕ್ರವಾರ

ಕೊಡಗಿನ ಭವಿಷ್ಯತ್ತಿನ ನಿರ್ಣಯ.

ಕೊಡಗಿನ ಭವಿಷ್ಯ ನಿರ್ಣಯವು ಇ ಲ್ಲಿಯ ಜನರಿಗೆ ತಮ್ಮ ಪ್ರಾಣದಷ್ಟೇ ಪ್ರಾ ಮುಖ್ಯವಾದುದರಿಂದ ಆ ಕುರಿತು ಆಗಾ ಗ್ಗೆ ಬರೆಯಬೇಕಾಗುತ್ತದೆ. ಮೊರ್ಜ್ ತಾರೀಕು ೧೬ರಲ್ಲಿ ಪಾರ್ಲಿಮೆಂಟಿನಲ್ಲಿ ನ ಡೆದ ಚರ್ಚೆಯಲ್ಲಿ ಕೊಡಗನ್ನು ಇಂದೋ ಸಾಳೆಯೋ ಬೇರೆ ಪ್ರಾಂತದೊಂದಿಗೆ ಸಂ ಯೋಜಿಸಬೇಕಾಗುವುದೆಂದು ಸಂಬಂಧಪ ಟ್ಟ ಮಂತ್ರಿಗಳು ಕೊಟ್ಟ ಹೇಳಿಕೆಯಷ್ಟು ಖಂಡಿಸಿ ಭವಿಷ್ಯದ ನಿರ್ಣಯದಹಕ್ಕ ಜ ನತೆಯ ದಾಗಿದೆಯೆಂದು ತಾ ೨೩-೫-೫೧ ರಲ್ಲಿ ನಾವು ಟೀಕಿಸಿದ್ದೆವು. ನಂತರ ಡೆಲ್ಲಿ ಯಿಂದ ಖಾಸಗಿಯಾಗಿ ತಿಳಿದ ವಿಚಾರಗ ಳ ಆಧಾರದ ಮೇಲೆ ಇಂಡಿಯಾ ಸರಕಾರ ಷ್ಟು ಕೊಡಗಿನ ಭವಿಷ್ಯದ ವಿಚಾರ ಏನೊಂ ದೂ ತೀರ್ಮಾನ ಮಾಡಿಲ್ಲವೆಂದೂ ಈ ತೀ ರ್ಮಾನವು ಬಹುವ ಚುನಾವಣೆ ವರೆಗೆ ಆ ಗುವದಿಲ್ಲವೆಂದೂ ಅದುದರಿಂದ ಬರುವ ಚುನಾವಣೆಯಲ್ಲಿ ಜನರು ತಪ್ಪ ಅಭಿಪ್ರಾ ಯವನ್ನು ಸ್ಪಷ್ಟಪಡಿಸಬೇಕೆಂದೂ ಅದರ ಫಲಿತಾಂಶದಂತೆಯೇ ಭವಿಷ್ಯದ ನಿರ್ಣ ಯವಾಗುವದೆಂದೂ ತಾ. ೧೩-೪-೫೧ ರ ಲ್ಲಿ ಪುನಹ ಜರೆದಿದ್ದೆವು. ಆದರೂ ಕಳೆ ದ ಕೊಡಗು ಕೌನ್ಸಿಲು ವಿಸರ್ಜನೆಗಿನಲ್ಲಿ ಇಂ ಡಿಯಾ ಸರಕಾರದವರು ಕೊಡಗನ್ನು ಸಂ ಯೋಜಿಸಲು ತೀರ್ಮಾನಿಸಿ ಬಿಟ್ಟಿರುವರೆಂ ದೂ ಈ ವಿಚಾರವು ಜನತೆಯ ಓಟಿನ ನೇಲೆ ನಿಂತಿರುವದಿಲ್ಲವೆಂದೂ ಸಂಯೋ ಜನಪಾದಿಗಳು ಬಲವತ್ತರವಾಗಿ ವಾದಿಸಿ ಸರು.

'ಸಿ' ಭಾಗದ ಸಂಸ್ಥಾನಗಳಿಗೆ ಸುಧಾ ರಣೆ ಕೊಡುವ ಮಸೂದೆಯೊಂದನ್ನು ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಮೊರ್ಜ್ ತಾರೀಕು ೩೦ರಲ್ಲಿ ಮುಂದಿಟ್ಟು ಇದರ ಚರ್ಚೆಯನ್ನು ಏಪ್ರಿಲ್ ತಾರೀಕು ೫೫ ರಲ್ಲಿ ಪ್ರಾರಂಭಿಸಿದಾಗ್ಯೆ 'ಕೊಡಗಿನ ಭವಿಷ್ಯ ತ್ತಿನ ನಿರ್ಣಯವನ್ನು ಕುರಿತು ಜನತೆಯ ಮನಸ್ಸಿನಲ್ಲಿದ್ದ ಸಂಶಯವನ್ನು ಸಂಪೂ ರ್ಣ ಪರಿಹಾರ ಮಾಡಿರುವರು. ಈ ಚ ರ್ಚೆಯ ವಿವರವನ್ನು ಬೇರೆಡೆ ಕೊಡಲಾ ಗಿದೆ. ಈ ಮಸೂದೆಯನ್ನು ಮಂಡಿಸಿದ ಸಂಸ್ಥಾನ ಖಾತೆಯ ಮಂತ್ರಿಯವ ರಾದ ಗೋಪಾಲಸ್ವಾಮಿಐಯ್ಯಂಗಾರರು ಇಷ್ಟರವರೆಗೆ ಸರಕಾರದವರು ತಿಳಿದಿರು ವ ಮಟ್ಟಿಗೆ ಕೊಡಗಿನ ಜನತೆಯ ಅಭಿ ಪ್ರಾಯವು ಸಂಪೂರ್ಣವಾಗಿ ಪ್ರತ್ಯೇಕವಾ ಗಬೇಕೆಂಬುದರ ಕಡೆಗೂ ಇಲ್ಲ; ಅಥ ವಾ ಬೇರೆ ಪ್ರಾಂತದೊಡನೆ ಸಂಯೋಜಿಸಬೇಕೆಂಬುದರ ಕಡೆಗೂ ಇ ಲ್ಲ. ಇಲ್ಲಿಯೂ ಕೂಡ ಜನರು ತಮ್ಮ ಅ ಭಿಪ್ರಾಯವನ್ನು ಸ್ಪಷ್ಟಗೊಳಿಸಲು ಇನ್ನು ಸ್ವಲ್ಪ ಕಾಲದ ಸಮಯವು ಬೇಕಾಗುವದು. ಚೀ ಫ್ ಕಮಿಷನರ ಪ್ರಾಂತಗಳ ಭವಿಷ್ಯತ್ತಿನ ನಿರ್ಣಯವನ್ನು ಸಾಕಷ್ಟು ಅವಧಿಯನ್ನು ಕೊಡಬೇಕಾಗಿದೆ. ಇದನ್ನು ಪ್ರೊ. ಶಾ ರ ರವರು ಹೇಳಿದಂತೆ ಸಂಬಂಧಪಟ್ಟ ಜನರ ಅಭಿಪ್ರಾಯವನ್ನು ಶಾಸ್ತ್ರಿಕರ ರೀತಿಯಿಂದ ತೆಗೆದೇಮಾಡಬೇಕಾಗುವದು' ಎಂದರು. ಈ ವಸೂಧೆಗೆ ಜವಾಬ್ದಾರರಾದ ಮಂತ್ರಿಯವ ರ ಮೇಲಿನ ಮಾತುಗಳಿಂದ ಯಾಕ ಮನಸಿ ನಲ್ಲಿಯೂ ಯಾವ ತರದ ಸಂಶಯವಿರಲು ಕಾರಣವಿಲ್ಲ ತಮ್ಮ ಪ್ರಾಂತದ ಭವಿಷ್ಯ ದ ನಿರ್ಣಯವು ತಮ್ಮ ಹಕ್ಕಾಗಿದೆ. ಎಂ ಬುದನ್ನು ಇನ್ನಾದರೂ ಜನತೆಯು ಚೆ ನ್ನಾ ಗಿಳಕೊಳ್ಳಲಿ. ತಮ್ಮ ಉದ್ದೇಶವಾ ದ ಕೊಡಗಿನ ಸಂಯೋಜನೆಯನ್ನು ಸಾ ಧಿಸಲು ಮಂತ್ರಿಗಳ ಮಾತುಗಳಿಗೆ ಅಪಾರ್ಥವನ್ನು ಕೊಟ್ಟು ಜನತೆಯು ಅ ಮೂಲ್ಯವಾದ ಹಕ್ಕನ್ನು ಅಲ್ಲಗಳೆಯುವ ಕೆಲವಕ ಪ್ರಯತ್ನಕ್ಕೆ ಜನರು ಬಲಿಬೀಳಲಿ ಕ್ಕಿಲ್ಲವಾಗಿ ನಂಬುತ್ತೇವೆ.

ಗೃಹಮಂತ್ರಿಯವರಾದ ಶ್ರೀ ರಾಜ ಗೋಪಾಲಾಚಾರಿಯವರು ಪಾರ್ಲಿಮೆಂ ಟಿನಲ್ಲಿ ಚರ್ಚೆಗೆ ಜವಾಬು ಕೊಡುತ್ತಾ "ಸಂಸ್ಥಾನವು ಚಿಕ್ಕಪ್ರಾದಷ್ಟೂ ಮತ್ತು ಜನಾಬ್ದಾರಿಯು ಕಡಿಮೆಯಾದಷ್ಟೂ ಆದರ ಆಡಳಿತ ಮಟ್ಟವು ಉತ್ತಮವೂ ದೊ ಡ್ಡದೂ ಆಗವದು. ನನಗೆ ಬಿಟ್ಟದ್ದೇ ಆದರೆ ಎ. ಮತ್ತು ಬಿ. ಭಾಗದ ಸಂಸ್ಥಾನ ಗಳನ್ನು 'ಸಿ' ಭಾಗಗಳ ಸಂಸ್ಥಾನಗಳ ಮಾ ತ್ರಕ್ಕೂ, ಮಟ್ಟಕ್ಕೂ ಇಳಿಸುವೆನು. ಆ ಗ್ಯೆ ಅಷ್ಟುಗಳನ್ನು ಸೀದಾ ಜನತೆಯು ಸಂ ಪರ್ಕವಿಟ್ಟುಕೊಂಡು ಆಳಲು ಸಾಧ್ಯವಾ ಗುವುದು. ಯಾವ ಹೆಸರೇ ಇರಲಿ ಗವ ರ್ನರುಗಳು ಮತ್ತು ಮಂತ್ರಿಗಳು ಜನರ ನೇರವಾದ ಸಂಪರ್ಕವನ್ನು ಇಟ್ಟುಕೊಳ್ಳ ಲಾಗುವದು" ಎಂದೂ ಹೇಳಿದರು. ಕೊ ಡಗು ಚಿಕ್ಕ ಪ್ರಾಂತವಾಗಿರುವ ದರಿಂದ ಇಲ್ಲಿಯ ಆಡಳಿತವು ಇ ತರ ದೊಡ್ಡ ಪ್ರಾಂತಗಳಿಗಿಂತಾ ಹೆಚ್ಚಿನ ಜಕ್ಷತೆಯಿಂದ ನಡೆಸಲ್ಪಡುತ್ತಿದೆಯೆಂಬು ದು ಇಲ್ಲಿಯ ಜನತೆಯ ಅನುಭವದ ಮಾ ತು. ಇದನ್ನು ಹೊತಗಿನ ಜನರು ಅದ ರಲ್ಲೂ ಜವಾಬ್ದಾರಿ ಮನುಷ್ಯರು ಒಪ್ಪುವ ದು ದುರ್ಲಭವಾಗಿತ್ತು. ಬದಲು ಜವಾ ಬ್ದಾರಿ ಸರಕಾರ ನಡೆಸಲು ಚಿಕ್ಕ ಪ್ರಾಂತ ದಲ್ಲಿ ಸಾಧ್ಯವಿಲ್ಲವೆಂದೇ ಅಭಿಪ್ರಾಯ ಪಡುತ್ತಿದ್ದರು. ಆದರೆ ಸ್ವಾತಂತ್ರ್ಯ ದೊ ರೆತು ಪ್ರಜಾ ಜವಾಬ್ದಾರಿ ಸ ರಕಾರವು ಪ್ರಾರಂಭವಾಗಿ ಸುಮಾರು ನಾಲ್ಕು ವರ್ಷಗಳ ಅನುಭವ ದಿಂದ ಗೃಹಮಂತ್ರಿ ರಾಜಗೋಪಾಲಾಚಾ ರಿಯವರಂಥಾ ನಿಷ್ಣಾತ ರಾಜಕೀಯ ಧು ರೀಣರೂ, ದಕ್ಷ ಆಡಳಿತಗಾರರೂ ನಾವು ಈ ವರೆಗೆ ಸಾರುತ್ತಿದ್ದಂಥಾ ಈ ತತ್ವವ ನ್ನು ಇಂದು ಪಾರ್ಲಿಮೆಂಟ್ ಸ ಭೆ ಯ ಲ್ಲಿ ಬ ಹಿ ರಂ ಗ ವಾ ಗಿ ಒಪ್ಪಿಕೊಂಡದ್ದು ಕೊಡಗಿನ ಮುಂದಿನ ಆ ಡಳಿತಕ್ಕೂ ಹಾಗೂ ಹಿಂದೂದೇಶದ ಭವಿ ಷ್ಯತ್ತಿನ ರಾಜ್ಯಭಾರಕ್ಕೂ, ಗಾಂಧೀಜಿಯ ವರ ಚಿಕ್ಕ ಆಡಳಿತ ಭಾಗಗಳ ಯೆ ಜನೆ ಯಾದ ವಿಕೇಂದ್ರೀಕರಣ ತತ್ವಕ್ಕೂ ಶುಂ ಬಾ ಪ್ರೋತ್ಸಾಹದಾಯಕವೆಂಬುದರಲ್ಲಿ ಸಂದೇಹವಿಲ್ಲ. ಇದನ್ನು ಆಡಳಿತ ನಿಪು ಣರು ಕಾರ್ಯರೂಪಕ್ಕೆಳಿಸಿ ಭಾರತೀಯ ತಕಲ್ಯಾಣವನ್ನು ಸಾಧಿಸುವರಾಗಿ ಆಶಿ ಸುತ್ತೇವೆ.

ವರ್ತಮಾನ.

ಮೈಸೂರು ವಿಶ್ವವಿದ್ಯಾಲಯದ ಇಂ ಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ. ಬಾಚಮಂಡ ಎಂ. ಸುಬ್ಬಯ್ಯನವರು ತೇರ್ಗಡೆಯಾಗಿರುವರು.

ಭಾರತದ ಸೇನಾನಾಯಕರಾದ ಜನ ರಲ್ ಕಾರ್ಯಪ್ಪನವರು ತಾ. ೨೦ರಲ್ಲಿ ಮಡಿಕೇರಿಗೆ ಬಂದಿರುವರು. ಅವರಿಗೆ ಸಾರ್ವಜನಿಕ ಸ್ವಾಗತವಿತ್ತು ಬರಮಾಡಿ ಕೊಳ್ಳಲಾಯಿತು. ತಾ. ೪-೬-೫೧ರಲ್ಲಿ ಅವರು ವಾಪಾಸು ಹೋಗುವರು.

ತಾ. ೩೬-೫-೫೧ರಲ್ಲಿ ಸಿ. ಪಿ. ಸಿ ಬಸ್ ಗೇಟೇಜಿನಲ್ಲಿ ಬಸ್ ರಿಪೇರಿ ಮಾಡು ತ್ತಿದ್ದಾಗ ಆಕಸ್ಮಿಕವಾಗಿ ಬಸ್ ಚಲಿಸಿ ಅ ಡರಿಂದ ಡ್ರೈವರು ಈಶ್ವರ ಭಟ್ಟ ಎಂಬವ ರು ಗೆ ಕಡೆಗೆ ಒತ್ತರಿಸಲ್ಪಟ್ಟು ಆದರಿಂದಾ ಗಿ ಅವರ ಎಡಬು ಕೊಡೆಗಳೂ ಮುರಿದು ಹೋಗಿ ಅವರು ಮಡಿಕೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದಾರೆ.

ತಾರೀಕು ೨೯ರಲ್ಲಿ ಕುತ್ತುನಾಡು ಕೊಡಚೇರಿಯ ದವಸ ಭಂಡಾರದ ಹೊಸ ಕಟ್ಟಡವನ್ನು ಕೊಡಗಿನ ಸಹಕಾರ ಸಂಘ ಗಳ ರಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ತೆರೆ ಯಲ್ಪಟ್ಟಿತು.

— ಕುತ್ತುನಾಡು, ಬಿ ಶೆಟ್ಟಿಗೇರಿ, ಮೊ ದಲಾದ ಸುತ್ತುಮುತ್ತಲಿನ ಸಹಕಾರಿ ಸಂ ಘಗಳ ಸದಸ್ಯರ ಪರಿಷತ್ತೊಂದು ತಾ. ೨೯ರಲ್ಲಿ ಕುತ್ತುನಾಡು ಭಗವತಿ ದೇವಸ್ಥಾ ನದಲ್ಲಿ ಶ್ರೀ. ಪಿ. ಐ. ಬೆಳ್ಯಪ್ಪನವರ ಅ ಧ್ಯಕ್ಷತೆಯಲ್ಲಿ ನಡೆಯಿತು.

ಹಾಕತ್ತೂರು ಗ್ರಾಮದ ಮೂಜಿಪಟೇ ಲರಾಗಿದ್ದ ಅಮ್ಮಟಂಡ ಗಣಪತಿಯವರು ತಮ್ಮ ೬೮ನೇ ವಯಸ್ಸಿನಲ್ಲಿ ತಾ ೮-೫-೫೧ರಲ್ಲಿ ಶಿವಾಧೀನ ಹೊಂದಿ ದರು.

ಕೊಡಗು ಕಂಪೆನಿಯ ವಾರ್ಷಿಕ ಮಹಾಸಭೆ.

ಈ ತಾರೀಕು ೧೫ರಲ್ಲಿ ಕೊಡಗು ಲಿ ಮಿಟೆಡ್ ಕಂಪೆನಿಯ ಶೇರುದಾರರ ವಾ ರ್ಷಿಕ ಮಹಾಸಭೆಯು ವೀರಾಜಪೇಟೆ ಸ ಹಕಾರ ಮಾರ್ಕೆಟಿಂಗ್ ಫೆಡರೇಶನ್ ಹಾ ಲ್‌ನಲ್ಲಿ ಬೆಳಿಗ್ಗೆ ೧೦೩೦ ಗಂಟೆಗೆ ನಡೆ ಯುವದು.

ಮೇನೇಜರ್.

ಭವಿಷ್ಯ ನಿರ್ಣಯ ಜನರ ಕೈಯಲ್ಲಿದೆ.

(ಇನ್ನೇ ಪುಟದಿಂದ ಸಾಗಿದ್ದು)

ಈವದರಿಂದ ಸಂರಕ್ಷಣೆಯ ದೃಷ್ಟಿಯಿಂ ದ ಅವು ಪ್ರತ್ಯೇಕವಿಷ್ಟು ಕೇಂದ್ರದ ಅಂಕಿ ತಸಲ್ಲಿರಬೇಕಾದುದು ಸೂಕ್ತ. ಮತ್ತೆ ಅಜವಿೂರ್, ಬೋಪಾಲ್ ಅಥವಾ ಚಿಕ್ಕ ಸಂಸ್ಥಾನವಾದ ಬಿಲಾಸಪುರ ಇವುಗಳಿವೆ. ಇವು ಪ್ರತ್ಯೇಕ ಇರಬೇಕೋ ಬೇರೆಪ್ರಾಂ ತಗಳೊಡನೆ ವಿಲೀನವಾಗಬೇಕೋ ಎಂಬು ದುದರ ಪರೀಕ್ಷೀಲನೆಯನ್ನು ಮಾಡಬೇಕಿ ದೆ. ಈ ಪರೀಕ್ಷಿಲನೆ ಮಾಡುವಾಗ ಪ್ರೋ. ಶಾರವರು ಹೇಳಿದಂತೆ ಜನತೆಯ ಅಭಿಪ್ರಾ ಯವನ್ನು ತೃಪ್ತಿಕರವಾದ ಮಾರ್ಗದಿಂದ ತಿಳಿದು ಸರಕಾರವು ಮಾಡಬೇಕಾಗಿದೆ.

ಕೊಡಗಿನ ವಿಷಯದಲ್ಲಿ ಸರಕಾರಕ್ಕೆ ತಿಳಿದು ಬಂದ ಮಟ್ಟಿಗೆ ಪ್ರತ್ಯೇಕವಿಡಲು ಯಾ ವಿಲೀನಗೊಳಿಸಲು ಒಮ್ಮತವಾದ ಅ ಭಿಪ್ರಾಯವಿಲ್ಲ. ಅವರ ಅಭಿಪ್ರಾಯವು ಒಂದು ನಿರ್ದಿಷ್ಟ ರೂಪಕ್ಕೆ ಬರಲು ಹೆಚ್ಚಿ ನ ಸಮಯ ಬೇಕು. ಈಗ ಬೋಪಾಲಿ ನ ಬಹುಮತ ಜನರು ವಿಲೀನೀಕರಣವಾ ಗಬೇಕೆಂದರೂ ಅಲ್ಲಿಯ ನವಾಬರಿಗೆ ಕೊ ಟ್ಟ ಮಾತಿನ ಮೇರೆ ಅವರನ್ನು ಒಪ್ಪಿಸಿ ಯೇ ವಿಲೀನಿಕರಣವಾಗಬೇಕಿದೆ.

ಡೆಲ್ಲಿಯ ಸ್ಥಿತಿಯು ಭಿನ್ನವಾಗಿದೆ. ಅಲ್ಲಿಯ ಜನರು ಇತರ ಭಾಗಗಳಂತೆಯೇ ಮುಂದರಿದವರು. ಅದು ಕೇಂದ್ರ ಸರ ಕಾರದ ಸ್ಥಾನವಾಗಿರುವದರಿಂದ ಅದರ ಸಮಸ್ಯೆಗಳು ಕಠಿಣವಾದವು. ಆದ್ದರಿಂ ದ ಅದರ ಆಡಳಿತದಲ್ಲಿ ಜನರಿಗೆ ಪರಿಣಾ ಮಕಾರಿಯಾದ ಅಧಿಕಾರವನ್ನು ಕೊಡಬೇ ಕಾಗಿದೆ. 'ಸಿ' ಭಾಗದ ಸಂಸ್ಥಾನಗಳಿಗೆಲ್ಲ ಈ ಸಭೆಯು ಒಂದೇ ನೀತಿಯನ್ನ ಅನು ಸರಿಸಲಾಗುವುದಿಲ್ಲ. ಕೆಲವು ಸಂಸ್ಥಾನಗ ಳಿಗೆ ಪ್ರಜಾ ಜವಾಬ್ದಾರಿ ಸರಕಾರ ಕೊ ಡುವ ಮಾರ್ಗವನ್ನು ಅನುಷ್ಠಾನಿಸಿದರೆ ಇ ನ್ನು ಕೆಲವು ಅಂದರೆ ಅರ್ಧಾಂಶದಷ್ಟು ವಿ ಲೀನಗೊಳ್ಳಬೇಕಾಗುವದು. ಅದ್ದರಿಂದ ವಿಲೀನಗೊಳ್ಳಬೇಕಾದ ಇಂಥಾ ಭಾಗಗಳಿ ಗೆ 'ಎ' ಭಾಗಗಳಂಥಾ ಆಡಳಿತ ಯೋಜ ನೆ ರಚಿಸುವದರಲ್ಲಿ ಅರ್ಥವಿಲ್ಲ. ಆದ್ದರಿಂ ದಲೇ ವಿಂಧ್ಯಾ ಪ್ರದೇಶ ಮತ್ತು ಹಿಮಾಚಲ ಪ್ರ ದೇಶಗಳಿಗೂ ಮತ್ತು ಳಿದವುಗಳಿಗೂ ಭಿನ್ನ ವಾದ ನೀತಿ ಅನುಸರಿಸಿದುದಾಗಿದೆ.

ಈಗ ಸೂಚಿತವಾಗಿರುವ ಕೌನ್ಸಿಲರು ಗಳ ಯೋಜನೆಯನ್ನು ಟೀಕಿಸಿ ಅದನ್ನು ವೈಸರಾಯರ ಸಲಹಾ ಸಮಿತಿಗೆ ಹೋಲಿ ಸಲಾಗಿದೆ. ಆದರೆ ಇವರು ಅವರಿಗಿಂಥಾ ಭಿನ್ನವಾದವರು. ಇವರು ಚೀಫ್ ಕಮಿಶ ನರೊಂದಿಗೆ ಆಡಳಿತದಲ್ಲಿ ಪಾಲುಗೊಳ್ಳುವ ವರು. ಅವರಿಗೆ ನಿರ್ದಿಷ್ಟ ಶಾಖೆಗಳ ಜ ವಾಬ್ದಾರಿ ಇರುವದು. ಹೀಗೆ ಮೂಡುವ ದರ ಗುರಿಯು ಕೇವಲ ಚೀಫ್ ಕಮಿಷ ನರೇ ನಿಯಮ, ಅಪ್ಪಣೆ ಹುಕುಂಗಳನ್ನು ಮಾಡುವವರಲ್ಲ; ಬದಲು ಅಲ್ಲಿಯ ಜನರ ಪ್ರತಿನಿಧಿಗಳಿಗೂ ಚೀಫ್ ಕಮಿಷನರಂತೆ ಅವರವರ ವ್ಯವಹಾರ ಕ್ಷೇತ್ರದಲ್ಲಿ ಅಧಿ ಕಾರವಿದೆಯೆಂಬುದು ಆ ಭಾಗಗಳ ಜನತೆಗೆ ಮನವದಟ್ಟು ಪಡಿಸಲಿಕ್ಕೆ ಆಗಿದೆ. ಚೀ ಫ್ ಕಮಿಷನರು ಈ ಕೌನ್ಸಿಲರುಗಳ ಮು ಖ್ಯಸ್ಥನಾದರೂ ಅವರೊಳಗೆ ಬರುವ ಭಿ ನ್ನಾಭಿಪ್ರಾಯವನ್ನು ನಿವಾರಿಸಲು ಬೇರೆ ಏರ್ಪಾಡು ಇದೆ.

ಈ ಮಸೂದೆಯಲ್ಲಿ ಒಂದು ನ್ಯೂನತೆ ಇದೆ. ಈ ಕೌನ್ಸಿಲರುಗಳು ಮತ್ತು ಚೀ ಫ್ ಕಮಿಷನರು ಶಾಸನ ಮತ್ತು ಆಡಳಿತ ಸಂಬಂಧ ವಿಚಾರಗಳಲ್ಲಿ ಆಲೋಚನೆ ತೆಗೆ ದುಕೊಳ್ಳಲು ಒಂದು ಸಭೆ ಇಲ್ಲ. ಸರ ಕಾರವು ಭಾಗ್ಯವರವರ ಸೂಚನೆಯನ್ನು ಒಪ್ಪಲು ತಯಾರಿದೆ. ಪ್ರತಿಯೊಂದು ಸಂ ಸ್ಥಾನಗಳಲ್ಲೂ ಇಲೆಕ್ಟರಲ್ ಕಾಲೇಜನ್ನು ರ್ಪಡಿಸಲಾಗುವದು. ಫ್ರೌಡ ಮತದಾನ ಪದ್ಧತಿಯಿಂದ ಆರಿಸಲ್ಪಡುವ ಈ ಕಾಲೇ ಜು ಪ್ರತಿ ಭಾಗದಿಂದ ಕೇಂದ್ರ ಶಾಸನ ಸ ಭೆಗೆ ಪ್ರತಿನಿಧಿಯನ್ನು ಚುನಾಯಿಸುವ ಕೆ ಲಸವನ್ನೂ ಮಾಡುವದು. ಪ್ರಾಮುಖ್ಯ ವಿಚಾರಗಳಲ್ಲಿ ಚೀಫ್ ಕಮಿಷನರು ಮ ತ್ತು ಕೌನ್ಸಿಲರುಗಳು ಪ್ರೆಸಿಡೆಂಟರು ನಿ ರ್ದೇಶಿಸುವ ರೀತಿಯಲ್ಲಿ ಈ ಸಭೆಯು ಅ ಭಿಪ್ರಾಯ ಕೇಳಬೇಕಾಗುವದು.

ಇಷ್ಟು ಚರ್ಚೆಯಾದನಂತರ ಶ್ರೀ ಅವ ದೇಶ ಪ್ರತಾಪರು ತಮ್ಮ ಠರಾವನ್ನು ವಾ ಪಾಸು ತೆಗೆದುಕೊಂಡರು. ಮಸೂದೆಯು ಚರ್ಚೆಗಾಗಿ ಸಭೆಯು ಮುಂದಿಡಲ್ಪಟ್ಟಿತು.

ಓದುಗರ ಓಲೆಗಳು

ಬದಲಾವಣೆಬೇಕು.

ಕೊಡಗಿನ ಕೆಲವು ಶಾಲೆಗಳಲ್ಲಿ ವಿಶೇಷವಾಗಿ ಆಗಬೇಕಾದ ಪ್ರಮುಖ್ಯವಾದ ಬದಲಾವಣೆಯೊಂದಿದೆ. ಬಹುಮತವಾಗಿ ಒಂದೇ ಮತದ ಉಪಾಧ್ಯಾಯರು ಅದೇ ಶಾಲೆಯಲ್ಲಿರುವುದೆಂದರೆ ಪರೀಕ್ಷಾ ಫಲಿತಾಂಶದಲ್ಲಿ ಬೇರೆ ಜಾತಿಯವರಿಗೆ ಭಿನ್ನಾಭಿಪ್ರಾಯವನ್ನು ತೋರಿಸುವುದಕ್ಕೆ ಅಪ್ಪದವಾಗುವುದೆಂದು ಧಾರಳವಾಗಿ ಹೇಳಬಹುದು. ಈ ರೀತಿಯವಾಗಿ ಶಾಲೆಗಳಲ್ಲಿ ಉಪಾಧ್ಯಾಯರನ್ನು ನೇಮಿಸುವುದು ಹಿಂದುಳಿದ ಪಂಗಡಗಳಿಗೆ ಅಸಾಧ್ಯವಾದ ಧಕ್ಕೆಯಾಗಿದೆ. ಇಡೀ ಶಾಲೆಯ ವಾತಾವರಣ ಮತ್ತು ದೃಷ್ಟಿಗೆ ಬದ್ಧವಿರೋಧವಾಗಿದೆ. ಯಾವಾಗಲೂ ಶಾಲೆಗಳಲ್ಲಿ ಅದಷ್ಟು ಮಟ್ಟಿಗೆ ಮಿಶ್ರ ಜಾತಿ ಉಪಾಧ್ಯಾಯರನ್ನು ನೇಮಿಸುವುದು ಯೋಗ್ಯವಾಗಿದೆ. ಜಿಲ್ಲಾ ವಿದ್ಯಾಧಿಕಾರಿಗಳು ಈ ವಿಶಯವನ್ನು ಅವಗಾಹನೆಗೆ ತಂದುಕೊಂಡು ಶೀಘ್ರವಾಗಿ ಬದಲಾವಣೆಯನ್ನು ಮಾಡಿ, ಹಿಂದುಳಿದ ಪಂಗಡಗಳ ವಿದ್ಯಾರ್ಥಿಗಳಿಗೆ ವಿದ್ಯಾಬುದ್ಧಿ ದೊರಕಿಸಿ ಮುಂದಕ್ಕೆ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡುವ ಜವಾಬ್ದಾರಿಯನ್ನು ವಹಿಸುವರೆ?

ಕೆ. ಕೆ. ಶಿವಪ್ಪ.

ಕೊಡ್ಲಿಪೇಟೆ ಶಾಲೆಯ ಪರೀಕ್ಷಾ ಫಲಿತಾಂಶ.

ಕೊಡ್ಲಿಪೇಟೆ ಶಾಲೆಯಲ್ಲಿ ಈ ವರ್ಷ ೫೫ ವಿದ್ಯಾರ್ಥಿಗಳು ಲೋವರ್ ಸೆಕೆಂಡರಿ ಪರೀಕ್ಷೆಗೆ ಕುಳಿತಿದ್ದರು. ಕಳೆದ ವಾರ ಫಲಿತಾಂಶಗಳು ಹೊರಬಿದ್ದಿವೆ ಈ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿಯೂ ಪಾಸಾಗಿಲ್ಲ ಎಂದೂ ಹೇಳಲು ತುಂಬಾ ವಿಷಾದಿಸುತ್ತೇವೆ. ಕೊಡ್ಲಿಪೇಟೆ ಶಾಲೆ ಹಿಂದೆ ಒಂದು ಕಾಲದಲ್ಲಿ ಕೊಡಗಿಗೆ ಮೊದಲನೆ ಶಾಲೆಯಾಗಿತ್ತು. ಈಗ ಈ ದುರವಸ್ಥೆಗಿಳಿಯಲು ಕಾರಣವೇನು? ಜವಾಬ್ದಾರರಾರು? ಪೋಷಕ ವರ್ಗದವರೇ ಅಥವಾ ಅಧಿಕಾರ ವರ್ಗದವರೇ?

ಮೊದಲು ಈಗಿರುವ ಪೋಷಕರ ಕೈಕೆಳಗೆ ತಮೂರಾಶ ಹುಡುಗರಿದ್ದಾಗಲೇ ಶಾಲೆಯಲ್ಲಿ ಒಳ್ಳೆಯ ಫಲಿತಾಂಶ ಬರುತ್ತಿತ್ತು. ಈಗ ಈ ದುರವಸ್ಥೆಗಿಳಿಯಲು ಪೋಷಕ ವರ್ಗದವರಲ್ಲಿ ಅಂತಹ ಬಡಲಾವಣೆಯೇನೂ ಆಗಿಲ್ಲ ಆದ್ದರಿಂದ ಪೋಷಕರ ಜವಾಬ್ದಾರಿ ಈ ವಿಷಯದಲ್ಲಿ ಕಿಂಚಿದ್ವಿದ್ಯಾಗ್ಯೂ ಅಧಿಕಾರ ವರ್ಗದವರ ಜವಾಬ್ದಾರಿ ಹೆಚ್ಚಿನದು ಎಂಬುದು ನಿರ್ವಾದ ಸಂಗತಿ.

ಕೊಡ್ಲಿಪೇಟೆ ಶಾಲೆಯ ಮೂಜಿ ಹೆಡ್‌ಮಾಸ್ಟರು ಆವರೇ ಹೇಳಿಕೊಳ್ಳುತ್ತಿದ್ದಂತೆ 'ಶಾಲೆಯೇ ಮನೆ, ಮನೆಯೇ ಶಾಲೆ' ಎಂದು ದುಡಿಯುತ್ತಿದ್ದರು. ಹೆಡ್‌ಮಾಸ್ಟರ ಮನೆಯೇ ಇಂತಹ ದುರವಸ್ಥೆಗೀಡಾಯಿತೆಂದು ಭಾವಿಸೋಣವೇ? ಅಥವಾ ಆವರು ಮನಸ್ಸಿಲ್ಲದೇ ಕೆಲಸ ಮಾಡುತ್ತಿದ್ದರೆಂದು ತಿಳಿಯೋಣವೇ? ಕಳೆದ ವರ್ಷವೇ ಆವರು ತಮ್ಮ ಕೆಲಸದಿಂದ ನಿವೃತ್ತರಾಗ ಬೇಕಾಗಿತ್ತು. ಆದರೆ ಸರಕಾರದವರು ಅವರಿಗೆ (ಆವರ ಪ್ರಾರ್ಥನೆಯ ಮೇಲೆ ಇರಬಹುದು) ಒಂದು ವರ್ಷ ಜೀವದಾನ ಮಾಡಿ, ೩೦ ರೂಪಾಯಿ ತಲಬಿನ ಮೇಲೆ ಕೆಲಸ ಕೊಟ್ಟರು. ಕಂಬಳ ಕವಿಯಾದ ಅಸಮಧಾನದಿಂದ ಹೆಡ್‌ಮಾಸ್ಟರವರು ಬಿಕ್ಕಾಬಿಟ್ಟಿಯಾಗಿ ಕೆಲಸಮಾಡಲಾರಂಭಿಸಿದರು. ಅದರ ಫಲವಾಗಿ ಶಾಲೆ ಈ ಸ್ಥಿತಿಗಿಳಿಯಿತು. ಸರಕಾರದವರು ನಿವೃತ್ತರಾದವರಿಗೆ ಪುನಃ ಕೆಲಸ ಕೊಡಬೇಕಾದ ಅವಶ್ಯಕತೆಯೂದರೂ ಏನಿತ್ತು? ಈಗಾದ ಅನ್ಯಾಯಕ್ಕೆ ಕಾರಣರಾರು?

ಒಂದು ವರ್ಷದಲ್ಲಿ ಎರಡು ಮೂರು ಸಲ ಡಿ. ಇ. ಒ. ಮತ್ತು ಎ. ಇ. ಒ. ಇವರುಗಳು ಪ್ರತಿ ಶಾಲೆಯು ಇನ್ಸ್‌ಪೆಕ್ಷನ್ನಿಗೆಂದು ಬರುತ್ತಾರೆ. ಹಾಗೆಯೇ ಕಳೆದ ವರ್ಷ ಕೊಡ್ಲಿಪೇಟೆ ಶಾಲೆಗೂ ಡಿ. ಇ. ಒ. ಮತ್ತು ಎ. ಇ. ಒ. ಬಂದಿದ್ದರು. ಆವತ್ತು ಅವರು ಇನ್ಸ್‌ಪೆಕ್ಷನ್ ಸಮಯದಲ್ಲಿ ಮಾಡಿದ್ದಾದರೂ ಏನು? ಶಾಲೆಯಲ್ಲಿ ಉಪಾಧ್ಯಾಯರುಗಳು ಮಾಡುತ್ತಿರುವ ಕೆಲಸ ಸಮರ್ಪಕವಾಗಿಲ್ಲವೆಂದು ತಿಳಿದ ಕೂಡಲೇ ತಕ್ಕ ಸಲಹೆಗಳನ್ನು ಕೊಡುವುದರಿಂದ ಮತ್ತು ವರ್ಗವರ್ಗಿಗಳ ಮೂಲಕ ಸ್ಥಿತಿಯನ್ನು ಸುಧಾರಿಸಬಹುದಾಗಿತ್ತು. ಹಾಗೇಕೆ ಮಾಡಲಿಲ್ಲ? ಡಿ. ಇ. ಒ ಮತ್ತು ಎ. ಇ. ಒ. ಇದಕ್ಕೆ ಉತ್ತರ ಕೊಡಲಿ.

ಕೊಡ್ಲಿಪೇಟೆ ಶಾಲೆಯಲ್ಲಿರುವ ೮ ಜನ ಉಪಾಧ್ಯಾಯರುಗಳ ಪೈಕಿ ೬ ಜನ ಈ ಊರಿನವರೇ! ತಮ್ಮ ಊರಿನಲ್ಲೇ ಉಪಾಧ್ಯಾಯರಾಗಿರುವರನೇಕರಿಗೆ ಶಾಲೆಯು ಪುರೋಭಿವೃದ್ಧಿ ಚಿಂತೆಗಿಂತ ತಮ್ಮ ಸ್ವಂತ ಮನೆಯ ಚಿಂತೆಯೇ ಹೆಚ್ಚು. ಆವರ ಸಮಯವೆಲ್ಲವೂ ತಮ್ಮ ಗದ್ದೆ ಹೊಲಗಳ ಚಿಂತೆಯಲ್ಲಿಯೇ ಕಳೆಯುತ್ತದೆ. ಇದರಿಂದ ಶಾಲೆಯ ಅಭಿವೃದ್ಧಿಗೆ ಧಕ್ಕೆ ಬಂದಿದೆ ಎಂದು ಸಾರ್ವಜನಿಕರ ಅಭಿಪ್ರಾಯ. ಹಾಗಿದ್ದಲ್ಲಿ ಊರಿನವರನ್ನು ಕೆಲವರನ್ನು ಬೇತೆ ಕಡೆ ವರ್ಗವಾಡಿ ತರಬೇತಾದ ಪದವೀಧರರಾದ ತರುಣರನ್ನು ಹೊರಗಿನಿಂದ ಇಲ್ಲಿಗೇಕೆ ಕಳುಹಿಸಬಾರದು? ಸಾಲಶ್ಡಕ್ಕೆ ಹೊಸದಾಗಿ ಖಾಲಿಬಿದ್ದ ಸ್ಥಳಕ್ಕೂ ಪುನಹ ಊರಿನವರನ್ನೇ ನೇಮಿಸಿದ್ದಾರೆ. ಅಧಿಕಾರಿಗಳ ಸ್ವೇಚ್ಛಾಪಕ್ಷಪಾತವೂ ಈ ನಡತೆಯ ಕಾರಣವೇನು? ದಾಕ್ಷಿಣ್ಯಾಪರತೆಯೋ, ಕರ್ತವ್ಯ ಬಾಹಿರತೆಯೋ ಅಥವಾ ಬೇಜವಾಬ್ದಾರಿತನವೋ!

ಸಂಬಂಧ ಪಟ್ಟ ಅಧಿಕಾರಿಗಳು ಈಗಲಾದರೂ ಕಣ್ಣು ತೆರೆದು ಶಾಲೆಯ ಅಭಿವೃದ್ಧಿಗೆ ಅವಶ್ಯವಾಹ ಬದಲಾವಣೆಗಳನ್ನು ಮಾಡುವರೆಂಬು ಬಯಸುತ್ತೇನೆ.

"ಅಭಿಮಾನಿ"

ಈ ಸರ್ವಾಧಿಕಾರ ಅವರಿಗಿದೆಯೇ?

ದೇಶದ ಸವರ್ಣ ಹಿಂದು ಮಹನಿಯರಲ್ಲಿನನ್ನ ವಿನಂತಿಗಳು:—

ಸ್ವತಂತ್ರ ಪ್ರಜಾರಾಜ್ಯದಲ್ಲಿ ಪ್ರತಿಯೊಬ್ಬರಿಗೂ ವ್ಯಕ್ತಿ ಸ್ವಾತಂತ್ರ್ಯ ಇಲ್ಲವೇ? ಇದ್ದರೆ ನಮ್ಮ ಏಳಿಗೆಗೂ ಅಭಿವೃದ್ಧಿಗೂ ಸವರ್ಣರಿನ್ನಿಸಿ ಕೊಳ್ಳುವ ತಾವುಗಳು ಧಕ್ಕೆ ತರುವುದೇತಕ್ಕೆ? ನಮ್ಮ ಮತ ಧರ್ಮದ ಪ್ರಕಾರ ನಮ್ಮ ಹಕ್ಕು ಬಾಧ್ಯತೆಗಳಿಗೆ ಹೋರಾಡಬೇಡವೆ? ಯುಗಯುಗಾಂತರದಿಂದಲೂ ತಾವು ಸುಖ ಅನುಭವಿಸಿರುವಾಗ ನಾವು ಅನುಭವಿಸಬೇಡವೆ? ಯಾವ ಕಾಲಕ್ಕೂ ನಾವು ಗುಲಾಮರಾಗಿಯೇ ಇರಬೇಕೆ? ನಾವು ವ್ಯವಸಾಯ ಮಾಡುವುದು, ವಿದ್ಯಾಭ್ಯಾಸ ಮಾಡುವುದು, ವಾಸಕ್ಕೆ ಯೋಗ್ಯ ಮನೆ ಮಾಡುವುದು, ಸರಕಾರಿ ನೌಕರಿ ಮಾಡುವುದು, ಶುಚಿಯೂದ ಉಡಿಗೆ ತೊಡಿಗೆ ಮತ್ತು ಆಭರಣ ತೊಡುವುದು ಬೇಡವೆ? ನಾವು ಮನುಷ್ಯ ವರ್ಗದವರಲ್ಲವೆ? ನಮ್ಮ ಧರ್ಮ, ಆಚಾರ ವಿಚಾರಗಳು ಹಿಂದೂ ಧರ್ಮಕ್ಕೆ ಸಂಬಂಧ ಪಟ್ಟಿಲ್ಲವೇ? ನಾವು ಲಾಗಾಯ್ತಿನಿಂದಲೂ ಮಾಡಿಕೊಂಡು ಬಂದಿರುವ ನಿಮ್ಮ ಸೇವಾ ವೃತ್ತಿಗಳನ್ನು ಈ ಹೊತ್ತಿನವರೆಗೂ ಮಾಡುತ್ತಿಲ್ಲವೆ? ನಿಮಗೆ ನಮ್ಮಿಂದ ಆಗುವ ಕೆಲಸಗಳಿಗೆ ಅಡ್ಡಿ ಬಂದಿಡೆಯೇ?

ಹೀಗಿದ್ದೂ ಕೂಡ ನಮಗೇಕೆ ಅನೇಕ ಬಾಬುಗಳಲ್ಲಿ ಕಿರುಕುಳ ಕೊಡುತ್ತಿದ್ದೀರಿ? ಇದು ನಿಮಗೆ ಧರ್ಮವೇ? ನ್ಯಾಯವೇ? ಎಂಬುದನ್ನು ತಾವೇ ವಿವೇಚಿಸಬೇಕಾಗಿದೆ. ಬಿದರೂರು ಬಸವೈಯ್ಯನ ಮಗನ ಲಗ್ನದ ಕಥೆ ೮-೫-೩೫ರ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

ತಾರೀಕು ೧೦-೫-೩೫ರಲ್ಲಿ ಶ್ರೀ ಪಿ. ಕೆ. ಚನ್ನಯ್ಯನವರ ಮಗನ ಲಗ್ನವು ವೈಸೂರು ಶೀಮೆ ಅಲದಳ್ಳಿ ಗ್ರಾಮದಲ್ಲಿ ಹೆಣ್ಣಿನ ಮನೆಯಲ್ಲಿ ನಡೆಯಬೇಕಾಗಿತ್ತು. ವೈಸೂರು ಶೀಮೆಗೆ ಕುದುರೆ ಛತ್ರಿಗಳು ಬೇಕೇ ಬೇಕಿದ್ದವು. ಸದರಿ ಚನ್ನಯ್ಯನವರು ಕುದುರೆ ಛತ್ರಿಗಳನ್ನು ಕೊಡಗಿನಲ್ಲಿ ಹಿಡಿದುಕೊಂಡು ವೈಸೂರು ಶೀಮೆಗೆ ಹೋಗುವ ಬಗ್ಗೆ ಡಿಪ್ಯುಟ್ಟಿ ವೇಜಿಸ್ಟ್ರೇಟ್ ಸಾಹೇಬರಿಂದ ಹುಕುಂ ಪಡೆದಿದ್ದರು. ತಾರೀಕು ೯-೫-೩೫ರ ರಾತ್ರಿ ಮದುವೆ ಆರ್ಕಲಗೋಡು ಹೊರ್ಗದಲ್ಲಿ ಹೋಗಬೇಕಾಗಿತ್ತು. ಆ ದಿವಸವೂ ಕೂಡ ಕುದುರೆ ಛತ್ರಿಗಳನ್ನು ತರುತ್ತಾರೆಂದು ತಿಳಿದು ಪಟೇಲ್ ಮೊಂತುಗೌಡರೆಂಬವರು ನಿಲುವಾಗಿಲು ಗೇಟು ಬಳಿ ೩೦೦ ಜನರ ಮೇಲೆ ಕೂಟ ಕಟ್ಟಿಕೊಂಡು ಇಡೀ ರಾತ್ರಿ ಕಾದಿದ್ದರು. ಇದನ್ನು ತಿಳಿದ ಹರಿಜನರು ಭಯಸ್ಥರಾಗಿ ಮದುವೆಯನ್ನೇ ಕರೆದುಕೊಂಡು ಹೋಗಲಿಲ್ಲ.

ತಾರೀಕು ೧೦-೫-೩೫ರ ಬೆಳಿಗ್ಗೆ ಸಬ್ ಇನ್‌ಸ್ಪೆಕ್ಟರ ಮತ್ತು ಪೋಲೀಸಿನವರ ಸಹಾಯದಿಂದ ಮದುವೆಯನ್ನು ಕರೆದು ಕೊಂಡು ಹೋದದ್ದಾಗಿದೆ. ಜನಗಳೆಲ್ಲಾ ಗುಂಪು ಕೂಡಿ ಹುಲ್ಲಿಕೆ ಹಾಸಿಕೊಂಡು ಕುಳಿತಿದ್ದು, ಅಲ್ಲಲ್ಲಿ ಬೆಂಕಿ ಹಾಕಿದ್ದನ್ನು ಸಬ್ ಇನ್‌ಸ್ಪೆಕ್ಟರವರೇ ಅಜಮೂಯಿಸಿಗೆ ಮಾಡಿದ್ದಾರೆ ಸವರ್ಣ ಮಹನಿಯರು ಇದನ್ನು ವಿಮರ್ಶಿಸಿಬೇಕು. ಅಲ್ಲದೆ ಸರಕಾರವು ಸಹ ಇದನ್ನು ವಿಚಾರ ಮಾಡತಕ್ಕ ಸಂಗತಿಯಾಗಿದೆ.

ನನಗೆ ಇಷ್ಟೆಂದು ಕಿರುಕುಳ ಕೊಡುತ್ತಿರುವಾಗ ಲಿಂಗಾಯಿತ ಮತ್ತು ಹೆಗ್ಗಡೆ ಮಹನೀಯರ ಕಷ್ಟ ಸುಖಾದಿಗಳಿಗೆ ನಾವೇಕೆ ಹೋಗಬೇಕು? ಅವರ ಮನೆಗಳಲ್ಲಿ ಸತ್ತ ಧನಕರುಗಳನ್ನು ಏಕೆ ತೆಗೆಯಬೇಕು? ಅವರ ಮನೆಗಳಲ್ಲಿ ವಾದ್ಯ ಸಹ ಏಕೆ ಮಾಡಬೇಕು? ಹರಿಜನರು ಬಿಟ್ಟ ಚಾಕರಿಂಗಳನ್ನು ಮಾಡಲೇಬೇಕು. ಸತ್ತ ಧನಕರುಗಳನ್ನು ತೆಗೆಯಲೇಬೇಕು ಎಂಬ ಕಾನೂನಿದೆಯೇ? ಸವರ್ಣ ಹಿಂದುಗಳ ಸಹಾಯ ಸಹಕಾರಗಳಿಗೂ, ಪ್ರೀತಿ ವಿಶ್ವಾಸಗಳಿಗೂ ನಾವು ಅವರ ಹಿಟ್ಟು ಬಿಟ್ಟು ಮಾಡುತ್ತೇವಲ್ಲದೆ ಹೆಪರಿಕೆ ಬೆದರಿಕೆಗಳಿಗೆ ಹೊಡೆತ ಬಡಿತಗಳಿಗೆ ಮತ್ತು ಪಾಳೆಯಗಾರಿಕೆ ಪಬ್ಬಾಳಿಕೆಗಳಿಗಲ್ಲ ಎಂಬಂಶವನ್ನು ಈ ಮೂಲಕ ಶೃತ ಪಡಿಸಿದ್ದೇನೆ.

ಒಬ್ಬ ಹರಿಜನ ದುಃಖಿತ

Wanted

10,000 c. ft. of Rose-wood shipment logs and 10,000 c. ft. of matchwood, 10,000 c. ft. of Honne sq logs, 10,000 c. ft. of Teak, 10,000 c. ft. of Nandi, Mathi immediately.

Hundred or above acres of redeemed land with standing timber of all kinds located near road side. For further particulars please apply to-

C. G. Monnappa,
Timber merchant,
Ponnampet post,
South Coorg.

ಸ್ವಾಮಿ ಶ್ರೀ. ದೇಶಿಕಾನಂದಾಜಿಯವರ ಸನ್ಮಾನಕ್ಕಾಗಿ ಆದ ಹಣ ವಸೂಲಿ ಮತ್ತು ಖರ್ಚಿನ ವಿವರ.

ಒಟ್ಟು ವಸೂಲಾದ ಹಣ—	೪೭೦೦
ಮಂಗಳಾರತಿ ತಟ್ಟೆಯಲ್ಲಿ ಸಿಕ್ಕಿದ ಹಣ	೨೫೬
	೪೯೫೬
ಸತ್ಕಾರ ಸಮಾರಂಭಕ್ಕೆ ಆದ ಒಟ್ಟು ಖರ್ಚು	೩೨೦೦
ಉಳಿಕೆ ಹಣ	೧೭೫೬

ಪ್ರೆಸಿಡೆಂಟ್,
ಮಡಿಕೇರಿ ವೇದಾಂತ ಮಂದಿರ.

Remington 'Personal' Portable Typewriters

Look for it at the Local Authorised Dealer

K. D. Appaiah & Bros.
General Stores,
MERCARA & VIRAJPET.

1-1

EAST & WEST INSURANCE CO., Ltd.

(LTD: 1913)

H. O:- 'East & West Building', Apollo street Fort, Bombay No. 1.

STANDS FOR

SAFETY, SECURITY & SERVICE.

It is a progressive concern offering attractive schemes for Insurance suitable to all needs.

For Particulars apply to:-

K. P. JAMBULINGAM,
Branch Secretary,
329, Thambu Chetty St.
Madras-1.

OR 4-3

C. C. NANJAPPA,
Inspector of Agencies,
Gonikopal.
S. Coorg.

ಹಿಂದೂಸ್ಥಾನದಲ್ಲಿ ರೇಡಿಯೋದ ಬಗ್ಗೆ ಆದ ಸುಧಾರಣೆಗಳು.

ರೇಡಿಯೋ ಜಗತ್ತು.

ನವೀನ ವಿಜ್ಞಾನ ಜಗತ್ತಿನಲ್ಲಿ ರೇಡಿಯೋವು ಮನುಷ್ಯರ ಜೀವನದಲ್ಲಿ ಒಂದು ಮಹತ್ವದ ಸ್ಥಾನವನ್ನು ಹಿಡಿಯುತ್ತಿದೆ. ಪಾಶ್ಚಾತ್ಯ ದೇಶಗಳಲ್ಲಂತೂ ಈ ಕ್ಷೇತ್ರದಲ್ಲಿ ಅದ್ಭುತ ಸುಧಾರಣೆಗಳು ಈಗಾಗಲೇ ಆಗಿವೆ. ಭಾರತದ ಜನರಿಗೆ ರೇಡಿಯೋವಿನಿಂದ ಎಷ್ಟರ ಮಟ್ಟಿಗೆ ಸೌಕರ್ಯಗಳಾಗಿವೆ ಮತ್ತು ಇನ್ನೂ ಹೆಚ್ಚಿನ ಸುಧಾರಣೆಗಳಿಗೆ ಎಷ್ಟರ ಮಟ್ಟಿಗೆ ಅವಕಾಶವಿದೆ ಎಂಬುದನ್ನು ಅವಲೋಕಿಸುವುದೇ ಈ ಲೇಖನದ ಉದ್ದೇಶವಾಗಿದೆ.

ಭಾರತದ ಎ. ಐ. ಆರ್. ಕೇಂದ್ರಗಳು

ಭಾರತದಲ್ಲಿ ರೇಡಿಯೋ ಕಾರ್ಯಕ್ರಮವನ್ನು ಕೇಂದ್ರ ಸರಕಾರದ "ಸುದ್ದಿ ಮತ್ತು ಆಕಾಶವಾಣಿ" ಇಲಾಖೆಯ ಕೈಕೆಳಗಿರುವ ಎ. ಐ. ಆರ್. ತನ್ನ ವಿವಿಧ ಕೇಂದ್ರಗಳಿಂದ ಬಿತ್ತರಿಸುತ್ತದೆ. ಈ ಕೇಂದ್ರಗಳಲ್ಲಿ ಡೆಲ್ಲಿ, ಮುಂಬೈ, ಕಲಕತ್ತಾ, ಮದ್ರಾಸು ಇವು ಬಹಳ ಪ್ರಬಲವಾದುವುಗಳಾಗಿವೆ. ಧಾರವಾಡ, ವಿಜಯವಾಡ, ಕಲ್ಲಿಕೋಟಿ, ಔರಂಗಬಾದ, ಅಹಮದಾಬಾದ, ತಿರುಚಿನಪಳ್ಳಿ ಮೊದಲಾದ ಕೇಂದ್ರಗಳನ್ನು "ಪೈಲಟ್ ಸ್ಟೇಶನ್" ಎಂದು ಕರೆಯುತ್ತಾರೆ. ಈ ಕೇಂದ್ರಗಳಿಂದ ಮಧ್ಯಮ ಅಲೆಗಳು ಪ್ರಸರಿಸಲ್ಪಡುತ್ತವೆ. ಈ "ಪೈಲಟ್ ಸ್ಟೇಶನ್"ಗಳಿಂದ ಬಿತ್ತರಿಸಲ್ಪಟ್ಟ ಕಾರ್ಯಕ್ರಮಗಳನ್ನು ಹಗಲು ಸಮಯದಲ್ಲಿ ಅಂ-೧೦೦ ಮೈಲುಗಳ ತನಕ ತೃಪ್ತಿಕರವಾಗಿ ಕೇಳಬಹುದು. ರಾತ್ರಿ ಸಮಯದಲ್ಲಿ ಇವನ್ನು ಬಹು ಹೆಚ್ಚಿನ ದೂರದ ವರೆಗೆ ಕೇಳಬಹುದು. ಒಮ್ಮೊಮ್ಮೆ ಕೆಲವು ಸ್ಟೇಶನ್‌ಗಳ ಕಾರ್ಯಕ್ರಮಗಳು ರೇಡಿಯೋಗಳಿಂದ ಕೇಳಿಸದೇ ಇರಲು ಸಾಧಾರಣವಾಗಿ ಆ ಕೇಂದ್ರಗಳು "ಪೈಲಟ್ ಸ್ಟೇಶನ್" ಗಳಾಗಿದ್ದು ಹೆಚ್ಚು ಪ್ರಬಲವಾಗದಿರುವುದೇ ಕಾರಣ. ಹವಾಮಾನವೂ ಕೂಡ ಕೇಳಿಕೆಯ ಮೇಲೆ ಪರಿಣಾಮವನ್ನುಂಟುಮಾಡುತ್ತದೆ.

ರೇಡಿಯೋ ಕಾರ್ಯಕ್ರಮ

ರೇಡಿಯೋ ಕಾರ್ಯಕ್ರಮಗಳಲ್ಲಿ ಮುಖ್ಯ ವಿಷಯವಾದ 'ವಾರ್ತೆ'ಯನ್ನು ಎ. ಐ. ಆರ್. ಡೆಲ್ಲಿ ಕೇಂದ್ರದಿಂದ ಬಿತ್ತರಿಸಲ್ಪಟ್ಟ ಬಳಿಕ ಎಲ್ಲಾ ಕೇಂದ್ರಗಳಿಂದಲೂ ಸಮಕಾಲಿಕವಾಗಿ ಪ್ರತಿಧ್ವನಿಸಲ್ಪಡುವುದು. ಉಳಿದ ಕಾರ್ಯಕ್ರಮಗಳು ಆಯಾಯ ಕೇಂದ್ರಗಳಲ್ಲೇ ಸ್ವತಂತ್ರವಾಗಿ ಅಲ್ಲಿಂದಲೇ ಪ್ರಸರಿಸಲ್ಪಡುತ್ತವೆ. ಸಾಮಾನ್ಯ ವಿಷಯಗಳಾದ ವಾರ್ತೆ, ಸಂಗೀತ, ಭಾಷಣ ಇವುಗಳಲ್ಲದೆ ಇನ್ನೂ ಕೆಲವು ವಿಶೇಷ ಕಾರ್ಯಕ್ರಮಗಳು ಈ ಕೇಂದ್ರಗಳಿಂದ ಪ್ರಸರಿಸಲ್ಪಡುತ್ತವೆ. ಈ ಕಾರ್ಯಕ್ರಮಗಳನ್ನು ಕೇಳಲು ಅನುಕೂಲವಾಗುವಂತೆ ಪ್ರಾಂತೀಕ ಸರಕಾರದವರು ಅನೇಕ ರೇಡಿಯೋ ಕೇಂದ್ರಗಳನ್ನು ಸ್ಥಾಪಿಸಿ ನಡೆಸುತ್ತಿದ್ದಾರೆ.

ಬೊಂಬಾಯಿ ಕೇಂದ್ರದ ವಿಶೇಷ ಕಾರ್ಯಕ್ರಮಗಳನ್ನು ಕೆಳಗೆ ಉದಾಹರಣೆಗಾಗಿ ಕೊಟ್ಟಿರುತ್ತೇನೆ.

ಬೊಂಬಾಯಿ ಕೇಂದ್ರದಿಂದ ಮಹಿಳೆಯರಿಗಾಗಿ 'ವನಿತಾ ಮಂಡಳ', ಶಾಲೆ ವಿದ್ಯಾರ್ಥಿಗಳಿಗಾಗಿ 'ಸ್ಕೂಲ್ ಬ್ರಾಡ್‌ಕಾಸ್ಟ್', ಕೂಲಿಗಾರರಿಗಾಗಿ 'ಲೇಬರ್ ಬ್ರಾಡ್‌ಕಾಸ್ಟ್' ಮತ್ತು ಹಳ್ಳಿಗರಿಗಾಗಿ 'ರೂರಲ್ ಬ್ರಾಡ್‌ಕಾಸ್ಟ್' ಮೊದಲಾದ ಕಾರ್ಯಕ್ರಮಗಳು ಪ್ರಸರಿಸಲ್ಪಡುತ್ತವೆ.

ಮಹಿಳಾ ಮಂಡಳ.

ಈ ಕಾರ್ಯಕ್ರಮವು ಮಹಿಳೆಯರ ಪ್ರಯೋಜನಕ್ಕಾಗಿಯೇ ಬಿತ್ತರಿಸಲ್ಪಡುತ್ತದೆ. ಗೃಹಕೃತ್ಯ, ಶಿಶುಪಾಲನೆ, ಅಡಿಗೆ, ಕಸೂತಿ, ಹೊಲಿಗೆ ಮೊದಲಾದ ವಿಷಯಗಳ ಜ್ಞಾನವನ್ನು ಈ ಕಾರ್ಯಕ್ರಮದ ಮೂಲಕ ತಿಳಿಸುತ್ತಾರೆ. ಈ ಕಾರ್ಯಕ್ರಮವನ್ನು ಮಹಿಳೆಯರಿಗೆ ಬಿಡುವು ಇರುವ ಸಮಯದಲ್ಲಿ ಇಟ್ಟಿರುತ್ತಾರೆ. ಉದಾಹರಣೆಗಾಗಿ ಬೊಂಬಾಯಿ ಪ್ರಾಂತದಲ್ಲಿ ಬೆಳಿಗಿನ ಊಟವು ಸಾಧಾರಣ ೧೦ ಗಂಟೆಗೆ ಮುಗಿಯುತ್ತದೆ. ಅಲ್ಲಿನ ಮಹಿಳೆಯರು ಬೆಳಿಗಿನ ಗೃಹ ಕೃತ್ಯವನ್ನು ಸಾಧಾರಣವಾಗಿ ೧೧ ಗಂಟೆಯ ಒಳಗೆ ಮುಗಿಸುತ್ತಾರೆ. 'ಮಹಿಳಾ ಮಂಡಳ'ವು ಮಧ್ಯಾಹ್ನ ವೇಳೆಯಲ್ಲಿ ಇರುವಷ್ಟರಿಂದ ಮಹಿಳೆಯರಿಗೆ ಈ ಕಾರ್ಯವನ್ನು ಲಾಲಿಸಲು ಬಹಳ ಅನುಕೂಲವಿದೆ. ಸ್ವಂತ ರೇಡಿಯೋವಿನ ಮೂಲಕವಾಗಲೀ ಅಥವಾ ಮಹಿಳಾ ಸಮಾಜಗಳಲ್ಲಿರುವ ರೇಡಿಯೋವಿನ ಮೂಲಕವಾಗಲೀ ಅವರು ಈ ಕಾರ್ಯಕ್ರಮವನ್ನು ಕೇಳುತ್ತಾರೆ.

'ಸ್ಕೂಲ್ ಬ್ರಾಡ್‌ಕಾಸ್ಟ್'

ಈ ಕಾರ್ಯಕ್ರಮವು ಶಾಲಾ ಮಕ್ಕಳ ಪ್ರಯೋಜನಕ್ಕಾಗಿ ಇದೆ. ಶಾಲಾ ಮಕ್ಕಳಿಗೆ ಪ್ರತಿಯೊಂದು ಪಾಠ ಶಾಲೆಗಳಲ್ಲಿ ಶಿಕ್ಷಣ ಕೊಡಲು ಸರಿಯಾದ ತಜ್ಞ ಶಿಕ್ಷಕರು ದೊರಕುವುದು ದುರ್ಲಭ. ಗಣಿತ, ವಿಜ್ಞಾನ, ಚರಿತ್ರೆ ಮೊದಲಾದ ವಿಷಯಗಳಲ್ಲಿ ಪ್ರವೀಣರಾದ ಶಿಕ್ಷಕರ ಸ್ವಂತ ಭಾಷಣಗಳನ್ನಾಗಲೀ, ಅಥವಾ ಗ್ರಾಮಫೋನು ಪ್ಲೇಟುಗಳಲ್ಲಿ ದಾಖಲೆಯಾದ ಅವರ ಭಾಷಣಗಳನ್ನಾಗಲಿ, (ರೆಕಾರ್ಡೆಡ್ ಸ್ಪೀಚಸ್) ಬಿತ್ತರಿಸುವರು. ತನ್ಮೂಲಕ ಎಲ್ಲಾ ಶಾಲೆಯ ಪ್ರತಿ ವಿದ್ಯಾರ್ಥಿಗೂ ಆ ಅಮೂಲ್ಯ ಶಿಕ್ಷಣವು ಒಂದೇ ಸಮಯದಲ್ಲಿ ದೊರಕುವುದು. ಬೊಂಬಾಯಿ ಪ್ರಾಂತದಲ್ಲಿ ಈ ಕಾರ್ಯಕ್ರಮವನ್ನು ೪೫ ನಿಮಿಷಗಳಿಂದ ೫೦ ನಿಮಿಷಗಳ ತನಕ ಇಡುತ್ತಾರೆ. ಸಾಧಾರಣವಾಗಿ ಸಾಯಂಕಾಲದ ಈ ಸಮಯವು ಮಕ್ಕಳ ಪಾಠದ ಕಾಲ ಕ್ರಮಪಟ್ಟಿಯ ಕಡೆಯ ವೇಳೆಯಾದುದರಿಂದ ಅದನ್ನು ಹೆಚ್ಚಾಗಿ ಎಲ್ಲೆಲ್ಲಿಯೂ ಮನೋರಂಜನೆಯ ಕಾರ್ಯಕ್ರಮಕ್ಕಾಗಿ ವಿನಿಯೋಗಿಸಲಾಗಿದೆ. ಈ ಕಾಲವನ್ನು ರೇಡಿಯೋ ಭಾಷಣಕ್ಕೆ ಉಪಯೋಗಿಸುವುದರಿಂದಲೂ, ವಿದ್ಯಾದಾಯಕವಾದ ಸಿನೆಮಾ ಚಿತ್ರಗಳನ್ನು (ಎಜ್ಯುಕೇಟಿವ್ ಫಿಲ್ಮ್ಸ್) ಆ ಪ್ರಾಂತದ ಹೈಸ್ಕೂಲಿನ ಮಕ್ಕಳು ಸದುಪಯೋಗಿಸುತ್ತಾರೆ. ಎಲ್ಲಾ ಸರಕಾರಿ ಶಾಲೆಗಳಿಗೆ ಸರಕಾರದವರೇ ರೇಡಿಯೋ ಮತ್ತು ಸಣ್ಣ ಸಿನೆಮಾ ಯಂತ್ರಗಳನ್ನು ಕೊಟ್ಟಿರುತ್ತಾರೆ. ಮತ್ತು ಅಲ್ಲಿನ ಖಾಸಗೀ ಶಾಲೆಗಳಿಗೂ ಸಹ ಇವುಗಳನ್ನು ಕೊಳ್ಳಲು ಬೊಂಬಾಯಿ ಸರಕಾರದವರು ಧನ ಸಹಾಯ ಮಾಡಿದ್ದಾರೆ. ಈ ರೇಡಿಯೋಗಳನ್ನು ಆಯಾ ಶಾಲೆಯ ವಿಜ್ಞಾನ ಅಧ್ಯಾಪಕನು ನೋಡಿಕೊಳ್ಳುತ್ತಾನೆ.

'ಲೇಬರ್ ಬ್ರಾಡ್‌ಕಾಸ್ಟ್'

ಈ ಕಾರ್ಯಕ್ರಮವನ್ನು ೫ ಗಂಟೆಯಿಂದ ೬ ಗಂಟೆಯ ವರೆಗೆ ಪ್ರಸರಿಸುತ್ತಾರೆ. ಕಾರ್ಮಿಕರ ಪ್ರಯೋಜನಕ್ಕಾಗಿ ಪ್ರಾಂತದ ಹಲಕೆಲವು ಪಡೆಗಳಲ್ಲಿ ಕಾರ್ಮಿಕ ಸುಸ್ಥಿತಿ ಕೇಂದ್ರಗಳನ್ನು ತೆರೆದಿರುತ್ತಾರೆ. ಇಂಥಹ ಕೇಂದ್ರಗಳಲ್ಲಿ ಅವರ ಮನೋರಂಜನೆಗಾಗಿ ಆಟೋಟಗಳ ಸೌಕರ್ಯವನ್ನೂ, ವಾಚನಾಲಯಗಳನ್ನೂ, ವೈದ್ಯಕೀಯ ಸೌಕರ್ಯಗಳನ್ನೂ, ಪುಕ್ಕಟೆ ವಿದ್ಯಾದಾಯಕವಾದ ಸಿನಿಮಾ ಚಿತ್ರಗಳನ್ನೂ, ರೇಡಿಯೋ ಸೌಕರ್ಯವನ್ನೂ ಸರಕಾರದವರೇ ಕಲ್ಪಿಸಿ ಕೊಟ್ಟಿದ್ದಾರೆ. ಈ ಸುಸ್ಥಿತಿಗಳಲ್ಲಿರುವ ರೇಡಿಯೋಗಳನ್ನು ಆಯಾ ಕೇಂದ್ರದ ಕಾರ್ಯದರ್ಶಿಯು ನೋಡಿಕೊಳ್ಳುತ್ತಾನೆ ಈ ರೇಡಿಯೋಗಳ ಮೂಲಕ ಕಾರ್ಮಿಕರಿಗಾಗಿಯೇ ಮುಂಬೈಯಿಂದ ಬಿತ್ತರಿಸಲ್ಪಟ್ಟ ಕಾರ್ಯಕ್ರಮಗಳನ್ನು ಕೇಳಲು ಅನುಕೂಲವಿದೆ.

'ರೂರಲ್ ಬ್ರಾಡ್‌ಕಾಸ್ಟ್'

ಗ್ರಾಮಸ್ಥರಿಗೋಸ್ಕರ ಇರುವ ಈ ಕಾರ್ಯಕ್ರಮವನ್ನು ಸಾಧಾರಣ ೬-೨೦ರಿಂದ ೭-೨೦ರ ವರೆಗೆ ಪ್ರಾದೇಶಿಕ ಭಾಷೆಗಳಾದ ಗುಜರಾತಿ, ಮರಾಠಿ; ಕನ್ನಡಗಳಲ್ಲಿ ಪ್ರಸರಿಸುತ್ತಾರೆ. ಈ ಕಾರ್ಯಕ್ರಮದ ಉಪಯೋಗವನ್ನು ಪಡೆಯಲು ಸರಕಾರದವರು ಹಲಕೆಲವು ಹಳ್ಳಿಗಳಲ್ಲಿ ಸರಕಾರೀ ರೇಡಿಯೋ ಕೇಂದ್ರಗಳನ್ನು ತೆರೆದಿರುತ್ತಾರೆ. ಇಂಥಹ ಕೇಂದ್ರಗಳನ್ನು ಸಾಧಾರಣವಾಗಿ ಗ್ರಾಮದ ಪಂಚಾಯಿತಿ ಆಫೀಸು, ಗ್ರಾಮದ ಚಾವಡಿ, ಪೊಲೀಸ್ ಪಾಟೇಲನ ಮನೆ, ಯಾ ಗ್ರಾಮ ಪ್ರಮುಖರೊಬ್ಬರ ಮನೆಗಳಲ್ಲಿ ತೆರೆದಿರುತ್ತಾರೆ. ಈ ರೇಡಿಯೋಗಳನ್ನು ಮೇಲ್ಕಂಡ ಸಂಸ್ಥೆಗಳ ಮುಖ್ಯಸ್ಥರ ಯಾ ಗ್ರಾಮ ಪ್ರಮುಖರ ಅಧೀನದಲ್ಲಿಯೇ ಇಡುತ್ತಾರೆ. ಈ ರೇಡಿಯೋಗಳನ್ನು ಪ್ರತಿದಿನವೂ ಸರಿಯಾಗಿ ನಡೆಸಲು ಚತುರರಾದ ಜನರು ಸಿಕ್ಕದ ಹಳ್ಳಿಗಳಲ್ಲಿ 'ಟೈಮ್ ಸ್ವಿಚ್' ಎಂಬ ಯಾಂತ್ರಿಕ ಉಪಾಯವನ್ನು ಬಳಸಿದ್ದಾರೆ ಈ ಯಂತ್ರವು ತನ್ನಷ್ಟಕ್ಕೇನೇ ರೇಡಿಯೋವನ್ನು ಬೇಕಾದ ಸಮಯದಲ್ಲಿ ನಡೆಸುತ್ತದೆ ಮತ್ತು ನಿಲ್ಲಿಸುತ್ತದೆ. ಅದು ಸರಿಯಾಗಿ ನಡೆಯಲು ತಿಂಗಳಿಗೊಮ್ಮೆ 'ಕೀ' ಕೊಟ್ಟರೆ ಸಾಕು. ರೇಡಿಯೋ ಕೇಂದ್ರಗಳಲ್ಲಿ ತಾನೇ ಅಂಚೆವೆಚ್ಚ ಕೊಟ್ಟು ಎಜ್ರಿಸ್ಗಳಿಂದ ಪೂರೈತವಾದ ರಿಪ್ಲೈ ಕಾರ್ಡುಗಳನ್ನು ಸರಕಾರದವರು ಇಟ್ಟಿರುತ್ತಾರೆ. ರೇಡಿಯೋಗಳು ಕೆಟ್ಟು ಹೋದರೆ ಗ್ರಾಮ ಸ್ಥರಲ್ಲೊಬ್ಬನು ಅಂಥಾ ಕಾರ್ಡುಗಳ ಮೂಲಕ ತಮ್ಮ ಭಾಷೆಯಲ್ಲೇ ಆ ಕುಂದು ಕೊರತೆಗಳನ್ನು ತಿಳಿಸಿದರೆ, ಸರಕಾರದವರು ಅದನ್ನು ಸರಿಪಡಿಸಲು ತಜ್ಞರನ್ನು ಕಳುಹಿಸುತ್ತಾರೆ. ಹಳ್ಳಿಗರಿಗಾಗಿ ಪ್ರಸರಿಸಲ್ಪಡುವ ಈ ಕಾರ್ಯಕ್ರಮದಲ್ಲಿ ಕೃಷಿ, ದನಕರುಗಳ ಸಾಕುವಿಕೆ, ಜೇನು ನೊಣಗಳ ಸಾಕುವಿಕೆ, ಗೊಬ್ಬರ ಹಾಕುವಿಕೆ, ಹಳ್ಳಿಗರ ಗಾನ, ಹಳ್ಳಿಯ ರೀತಿ ನೀತಿ ನಡತೆಗಳು ಮೊದಲಾದ ವಿಷಯಗಳು ಅಡಕವಾಗಿರುತ್ತವೆ. ಇಷ್ಟಲ್ಲದೆ ಹಲಕೆಲವು ಹಳ್ಳಿಗಳಲ್ಲಿ 'ಫಾರಂ ಫ್ಲೋರಂ' ಎಂಬ ವಿಶೇಷ ಕೇಂದ್ರಗಳನ್ನು ತೆರೆದಿರುತ್ತಾರೆ. ಈ ಕೇಂದ್ರಗಳಲ್ಲಿ ಹಳ್ಳಿಗರದೇ ಆದ ಸಮಿತಿಗಳನ್ನು ಸರಕಾರದವರು ನೇಮಿಸುತ್ತಾರೆ. ಈ ಸಮಿತಿಯು ವಾರಕ್ಕೆ ಒಂದು ಅಥವಾ ಎರಡು ಬಾರಿ ಹಳ್ಳಿಗರೊಡನೆ ಸಭೆಗೂಡಿ ಆಗಕಾನೆ ಕೇಳಿದ ವಿಶೇಷ ಕಾರ್ಯಕ್ರಮಗಳನ್ನು ಚರ್ಚಿಸಿ ತಪ್ಪು ವಿಮರ್ಶಾತ್ಮಕ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸುತ್ತಾರೆ. ಇದಕ್ಕೆ ಸಂಬಂಧಪಟ್ಟ ಅಂಜೆವೆಚ್ಚವನ್ನು ಸಹ ಸರಕಾರದವರೇ ನೋಡಿಕೊಳ್ಳುತ್ತಾರೆ.

ರೇಡಿಯೋ ಮತ್ತು ಅದನ್ನು ನಡೆಸಲು ಬೇಕಾದ ಸಲಕರಣೆಗಳು.

ರೇಡಿಯೋಗಳಲ್ಲಿ ಎರಡು ವಿಧ:-ಒಂದು ವಿದ್ಯುತ್ ಶಕ್ತಿಯ ಪೂರೈಕೆಯಿಂದ ನಡೆಯುವಂಥಾದ್ದು, ಮತ್ತೊಂದು ಬ್ಯಾಟರಿಗಳಿಂದ ನಡೆಯುವಂಥಾದ್ದು. ಭಾರತದ ಅನೇಕ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯ ಪೂರೈಕೆಯಾಗಿಲ್ಲವಾದುದರಿಂದ ಅಲ್ಲಿನ ರೇಡಿಯೋಗಳು ಬ್ಯಾಟರಿಗಳ ಸಹಾಯದಿಂದ ನಡೆಯಬೇಕಾಗಿದೆ.

ಬ್ಯಾಟರಿಗಳಲ್ಲಿ ಡ್ರೈ ಬ್ಯಾಟರಿ ಮತ್ತು ವೆಟ್ ಬ್ಯಾಟರಿ ಎಂಬ ಎರಡು ವಿಧ. ವೆಟ್ ಬ್ಯಾಟರಿಗಳು ಬರಿದಾದಲ್ಲಿ ಪುನಃ ತುಂಬಿಸಬಹುದು, ತುಂಬಿಸಿದ ಬ್ಯಾಟರಿಯು ೩೦ ತಾಸಿನ ತನಕ ಒಂದೇ ರೇಡಿಯೋವನ್ನು ನಡೆಸಬಲ್ಲದು. ವೆಟ್ ಬ್ಯಾಟರಿಗಳನ್ನು ಎಚ್ಚರವಾಗಿ ಉಪಯೋಗಿಸಿದರೆ ೨ ವರ್ಷಗಳ ತನಕ ತೃಪ್ತಿಕರವಾದ ಕೆಲಸವನ್ನು ಪಡೆಯಬಹುದು. ಮೋಟಾರು ಕಾರುಗಳಲ್ಲಾಗಲೀ, ಗಿರಣಿಗಳಲ್ಲಾಗಲೀ ಬ್ಯಾಟರಿಗಳನ್ನು ತುಂಬಿಸುವುದಲ್ಲು ಅವುಗಳ ಆಯುಃಶ್ಯವು ಅರ್ಧಕ್ಕಿಂತ ಕಡಿಮೆ ಆಗುವುದು. ವಾಯು ಯಂತ್ರಗಳ ಮೂಲಕ ಬ್ಯಾಟರಿಗಳನ್ನು ತುಂಬಿಬಹುದು. ಆದರೆ ನಮ್ಮ ಭಾರತದಂಯ ಗುಡ್ಡಗಾಡು ಪ್ರದೇಶಗಳಲ್ಲಿ ವಾಯುವಿನ ವೇಗವು ಕಡಿಮೆಯಾದ್ದರಿಂದ ಬ್ಯಾಟರಿಗಳನ್ನು ತುಂಬಿಸಲು ಸಾಧ್ಯವಿಲ್ಲೆಂದು ಕಂಡು ಬಂದಿದೆ. ವೆಟ್ ಬ್ಯಾಟರಿಗಳನ್ನು ತುಂಬಿಸಲು ಒಂದು ೨೫೦-೩೦೦ ರೂಪಾಯಿಗಳ ಕ್ರಯವಿರುವ ಪೆಟ್ರೋಲ್ ಎಂಜಿನ್ ಡ್ಯಾನೆಮೋವನ್ನು ಕೊಳ್ಳುವುದು ಲೇಸು. ಇವುಗಳಿಂದ ೧೫೦-೨೦ ಲೈಟುಗಳನ್ನೂ ಸಹ ಉರಿಸಬಹುದು. ಒಂದು ಗ್ಯಾಲನ್ ಪೆಟ್ರೋಲ್‌ನಿಂದ ಈ ಎಂಜಿನ್ನಲ ತಾಸುಗಳ ವರೆಗೆ ನಡೆಯುತ್ತದೆ. ಡ್ರೈ ಬ್ಯಾಟರಿಯು ಒಮ್ಮೆ ಬರಿದಾದರೆ ಪುನಃ ತುಂಬಿಸಲು ಬರುವುದಿಲ್ಲ ಒಂದು ಡ್ರೈ ಬ್ಯಾಟರಿಯ ಕ್ರಯವು ಸಾಧಾರಣ ೫೫-೭೦ರೂ. ಒಂದು ವೆಟ್ ಬ್ಯಾಟರಿಯ ಕ್ರಯವು ಸಾಧಾರಣ ೯೦-೧೩೦ ರೂ. ವೆಟ್ ಬ್ಯಾಟರಿಯ ಮೂಲಕ ರೇಡಿಯೋವನ್ನು ನಡೆಸುವುದಾದರೆ ಎರಡು ವೆಟ್ ಬ್ಯಾಟರಿಗಳ

ವಾರ್ತೆಗಳು.

ಒಬ್ಬ ವಧುವಿಗಾಗಿ ಇಬ್ಬರ ಹೋಟೆಲಿನಲ್ಲಿ ನರಮಾಂಸ ವಿತರಣೆ

ಪೈಪೋಟಿ

ಸಭೆಯಲ್ಲಿ ಇಬ್ಬರು ವರರು ಒಬ್ಬ ವಧುವಿಗಾಗಿ ತಮ್ಮ ಹಕ್ಕನ್ನು ಸಾಧಿಸಿ ಪ್ರಯತ್ನ ಫಡೆಸಿದಾಗ ಬಲಾತ್ಕಾರವಾಗಿ ವಧುವನ್ನು ಪಶಪಡಿಸಿಕೊಳ್ಳಲು ಬಂದ ವರನನ್ನು ದಸ್ತಗಿರಿ ಮಾಡಲಾಯಿತು. ಈ ದೃಶ್ಯವನ್ನು ೫ ಸಾವಿರ ಮಂದಿ ನೋಡಿದರು.

ಗಣೇಶಪೇಟೆಯ ಜಂಗಿಯಾ ಎಂಬುವರು ತಮ್ಮ ಮಗಳಾದ ವತ್ಸಲಾವಿಗೆ ಜೆಂದುವಿನ ಮಗನಾದ ವಿಠೋಬನೆಂಬ ವರನನ್ನು ಗೊತ್ತುಮಾಡಿದರು. ಆದರೆ ಮೂರ್ಖತೆ ಹೊಂದದೆ ಹೋದುದರಿಂದ ಆಕೆಯನ್ನು ಪೌನಿಹಳ್ಳಿಯದಾಸರ ಮಗ ಜೆಂಡು ಎಂಬುವನಿಗೆ ಕೊಡಲು ನಿಶ್ಚಯಿಸಿದರು. ಮದುವೆಯನ್ನು ಏರ್ಪಡಿಸಿದರು.

ಜೆಂದುವು ತನ್ನ ಪರಿವಾರದೊಡನೆ ಲಗ್ನಕ್ಕಾಗಿ ನಾಗಪುರಕ್ಕೆ ಬಂದನು ಆ ಸುದ್ದಿಯನ್ನು ಅರಿತ ವಿಠೋಬನು ವರನಂತೆಯೇ ವೇಷ ಧರಿಸಿ ಬಂದನು.

ವಧುವಿನ ತಂದೆಗೆ ಏನು ಮಾಡಬೇಕೆಂಬುದೇ ಗೊತ್ತಾಗದೆ ಪೋಲೀಸರ ಮೊರೆಹೊಕ್ಕನು. ಜೆಂಡು ಮತ್ತು ಅವನ ಪರಿವಾರದವರೂ ಹೊತ್ತಾಲಿಗೇ ಹೋದರು. ವಿಠೋಬ ಮತ್ತು ಆತನ ಪರಿವಾರದವರೂ ಅವರನ್ನೇ ಹಿಂಬಾಲಿಸಿದರು.

ಪೋಲೀಸ್ ಸೂಪರಿಂಟೆಂಡೆಂಟ್ ಅವರನ್ನು ಮದುವೆಯೊಗಲು ಸಿದ್ಧವಾಗಿರುವೆ' ಎಂಬುದಾಗಿ ವಧುವತ್ಸಲಾಳನ್ನು ಕೇಳಿದಾಗ ಆಕೆ ಜೆಂದುವನ್ನು ತೋರಿಸಿದಳು.

ವಿಠೋಬನನ್ನೂ ಮತ್ತು ಆತನ ಇಬ್ಬರು ಪರಿವಾರದವರನ್ನೂ ದಸ್ತಗಿರಿ ಮಾಡಲಾಯಿತು ವಧುವನ್ನು ಜೆಂದುವಿಗೇ ಕೊಟ್ಟು ವಿವಾಹ ಮಾಡಲಾಯಿತು.

ಬೇಕು. ಯಾಕೆಂದರೆ ಒಂದು ಬರಿದಾದಾಗ ಇನ್ನೊಂದನ್ನು ಉಪಯೋಗಿಸಬಹುದು. ಒಂದು ಬ್ಯಾಟರಿಯು ಸಾಧಾರಣ ೨೪೦-೨೬೦ ಕಾಸುಗಳ ತನಕ ಕೆಲಸಕ್ಕೆ ಬರುತ್ತದೆ. ವೆಟ್ ಬ್ಯಾಟರಿಯನ್ನು ಸರಿಯಾಗಿ ತುಂಬಿಸಲು ಬೇಕಾದ ಸಲಕರಣೆಗಳು ಸರಿಯಾಗಿ ದೊರಕದ್ದರಿಂದಲೂ, ಇತ್ತೀಚೆಗೆ ಡ್ರೈ ಬ್ಯಾಟರಿಗಳು ಬಹಳ ಪ್ರಚಾರದಲ್ಲಿವೆ. ಒಂದು ಡ್ರೈ ಬ್ಯಾಟರಿ ರೇಡಿಯೋ ಸೆಟ್ಟಿನ ಕ್ರಯವು ರೂ ೨೫೦ ರಿಂದ ಮೇಲ್ಪಟ್ಟು ಇದೆ, ಮತ್ತು ವೆಟ್ ಬ್ಯಾಟರಿ ರೇಡಿಯೋ ಸೆಟ್ಟಿನ ಕ್ರಯವು ರೂ ೪೦೦ ರಿಂದ ಮೇಲ್ಪಟ್ಟು ಇದೆ.

ಭಾರತದ ಎಲ್ಲಾ ಕಡೆಗಳಲ್ಲೂ ರೇಡಿಯೋ ಕ್ಷೇತ್ರದಲ್ಲಿ ಸುಧಾರಣೆ ಆದಂತೆ ಕೊಡಗಿನಲ್ಲಿಯೂ ಸಹ ಶಾಲೆಗಳಲ್ಲೂ, ಮಹಿಳಾ ಸಮಾಜಗಳಲ್ಲೂ ಕೂಲಿಗಾರರ ವಸತಿ ಸ್ಥಳಗಳಲ್ಲೂ ಜನನಿಬಿಡವಾದ ಹಳ್ಳಿಗಳಲ್ಲೂ, ರೇಡಿಯೊಗಳನ್ನು ಸ್ಥಾಪಿಸುವಂತಹ ಕಾರ್ಯವು ಗಣನಾರ್ಹವಾಗಿದೆ.

ಅವಿವಾಹಿತ ಉದ್ಯೋಗಿಗಳಿಗೆ ಕಡಿಮೆ ಸಂಬಳ

೧೯೪೮-೪೯ರ ನಂತರ ಉದ್ಯೋಗಕ್ಕೆ ಸೇರಿದ ಎಲ್ಲಾ ಕೆಲಸಗಾರರಿಗೆ ತುಟ್ಟಿ ಭತ್ತೆಯಲ್ಲಿ ಇಳಿತ ಹಂದೊಡ್ಡಲು ಕಲ್ಕತ್ತಾ ವಿಶ್ವವಿದ್ಯಾಲಯದವರು ನಿರ್ಣಯಿಸಿದಾಕೆ. ಇನ್ನು ನುಂದೆ ಅವಿವಾಹಿತ ಉದ್ಯೋಗಿಗಳಿಗೆ ಅವರ ಸಂಬಳದ ಶೇಕಡಾ ೭½ಯಷ್ಟು ಮಾತ್ರ ತುಟ್ಟಿ ಭತ್ತೆ ಸಿಗುವುದು; ವಿವಾಹಿತ ಉದ್ಯೋಗಿಗಳಿಗೆ ಸಂಬಳದ ಶೇಕಡಾ ೧೭½ರಷ್ಟರ ವರೆಗೆ ತುಟ್ಟಿ ಭತ್ತೆ ಸಿಗಬಹುದು. ೧೯೪೮-೪೯ರಿಂದ ಪಡೆದ ಸಂಬಳದಲ್ಲಿ ಶೇಕಡಾ ೧½ಗಿಂತ ಹೆಚ್ಚಿಗೆ ಪಡೆದ ತುಟ್ಟಿ ಭತ್ತೆಯನ್ನು ಹಿಂದೆ ಕೊಡಬೇಕೆಂಬ ಕೇಳಿಕೆಯೂ ಹೊರಡಬಹುದೆಂದು ಅನುಮಾನಿಸಲಾಗಿದೆ. ವಿವಾಹಿತ ಉದ್ಯೋಗಿಗಳಿಗೆ ಸಂತಾನ ಸಂಯಮನದ ಕುರಿತೂ ಉಪದೇಶಿಸಲಾಗುವುದಂತೆ. ವಿಶ್ವವಿದ್ಯಾಲಯದವರ ಈ ಹೊಸ ಯೋಜನೆಯಿಂದ ಸಾವಿರಾರು ಮಂದಿ ಅವಿವಾಹಿತ ಕನ್ಯೆಯರ ಬಾಳು ಬೇಗನೇ ಬೆಳಗಬಹುದೆಂದು ನಿರೀಕ್ಷಿಸಲಾಗಿದೆ.

ಸಂತತಿ ಸಂಯಮನ ಕೇಂದ್ರ

ಡಿಲ್ಲಿಯಲ್ಲಿ ಸ್ಥಾಪಿಸಲ್ಪಟ್ಟ ಸಂತತಿ ಸಂಯಮನ ಕೇಂದ್ರದವರು, ಸಂತಾನ ನಿರೋಧ ವಸ್ತುಗಳ ಮೇಲಿನ ನಿರ್ಬಂಧಗಳನ್ನು ತೆಗೆದುಹಾಕಬೇಕೆಂದು ಸರಕಾರದೊಡನೆ ಕೇಳಿಕೊಂಡಿರುವರು. ಈ ತನಕ ಸುಮಾರು ೫೦೦೦ ಜನರು (ಇವರಲ್ಲಿ ನೂರಕ್ಕಿಂತಲೂ ಹೆಚ್ಚು ಸ್ತ್ರೀಯರು) ಈ ಕೇಂದ್ರವನ್ನು ಸಂದರ್ಶಿಸಿರುವರು. ಸಂತಾನ ನಿರೋಧ ಸಹಾಯಕ ಶಸ್ತ್ರ ಕ್ರಿಯೆಯು (ಬಂಜೆತನಕ್ಕೆ) ೧೨ ಮಂದಿಯ ಮೇಲೆ ನಡೆದಿದೆ. ಈ ಕೇಂದ್ರವು ಇದೇ ಕಳೆದ ಫೆಬ್ರವರಿ ತಾ. ೯ರಲ್ಲಿ ತೆರೆಯಲ್ಪಟ್ಟಿದ್ದು.

ಜರ್ಮನಿಯಲ್ಲಿ ನಾಜಿ ತತ್ವ

ಪಶ್ಚಿಮ ಜರ್ಮನಿಯಲ್ಲಿ ಪುನಃ ನಾಜಿಗಳು ಕಳೆದು ಹೋದ ತಮ್ಮ ಅಧಿಕಾರವನ್ನು ಸ್ಥಾಪಿಸುವ ಹವ್ಯಾಸಕ್ಕಿಳಿದಿರುವರೆಂದು ತಿಳಿದುಬಂದಿದೆ. ಪಶ್ಚಿಮ ಜರ್ಮನಿ ಸರಕಾರವು ಈ ಗಂಢಾಂತರವನ್ನು ತಿಳಿದುಕೊಂಡು ಹೊಸ ನಾಜಿ ಸೋಶಿಯಲಿಸ್ಟ್ ಪಕ್ಷದ ಮುಂದಾಳಾದ ಡಾ. ಫ್ರಿಟ್ಸ್ ಡೊರ್ಲ್ಸ್ ಮೊದಲಾದ ಮುಂದಾಳುಗಳು ಸಾರ್ವಜನಿಕ ಭಾಷಣ ಮಾಡದಂತೆ ನಿರ್ಬಂಧ ಹಾಕಿದೆ.

ಮಹಾ ಯುದ್ಧದ ಅಂತ್ಯದಲ್ಲಿ ಜರ್ಮನಿಯು ಸೋತು ಮಿತ್ರಪಕ್ಷದವರಿಗೆ ಶರಣು ಬಂದಾಗ ಹಿಂದೆ ಅಧಿಕಾರದಲ್ಲಿದ್ದ ನಾಜಿಗಳ ಗತಿಯೇನಾಗಬಹುದೆಂಬ ಸಮಸ್ಯೆ ತಲೆಯೆತ್ತಿತ್ತು. ನಾಜಿ ಮುಂದಾಳುಗಳು ನಿರ್ನಾಮವಾದರೂ ಅನೇಕಾನೇಕ ಕಾರ್ಯಕರ್ತರೂ, ಮುಂದಾಳುಗಳನ್ನು ಅನುಸರಿಸಿದ ಸಾವಿರಾರು ನಾಜಿಗಳೂ ಮುಂದೇನು ಹೂಡುವರು ಎಂಬ ಪ್ರಶ್ನೆಯೂ ಅನೇಕರನ್ನು ಕಾಡುತಿತ್ತು. ಜರ್ಮನರು ನಾಜಿ ತತ್ವವನ್ನು ಮರೆತು ಬಿಟ್ಟರೆಂದು ಬಾಹ್ಯ ಜಗತ್ತು ತಿಳಿದುಕೊಂಡಿತು. ನಾಜಿಗಳು ಆ ರೀತಿ ವರ್ತಿಸಿದುದೇ ಇದಕ್ಕೆ ಕಾರಣ. ಆದರೆ ಇದೀಗ ನಾಜಿ ಶಕ್ತಿಯು ಸಂಘಟಿಸಿಕೊಳ್ಳುತ್ತಿರುವ ಲಕ್ಷಣಗಳು ಕಾಣುತ್ತಿವೆ. ನಾಜಿ ಶಕ್ತಿಯನ್ನು ಒಂದು ಪ್ರಬಲ ಶಕ್ತಿಯಾಗಿಯೇ ಪರಿಣಮಿಸಿಡಿಯೆಂಬುದು ಈಗ ಗೋಚರವಾಗುತ್ತಿದೆ.

ಮಿತ್ರರ ಕೈಕೆಳಗಿರುವ ಪಶ್ಚಿಮ ಜರ್ಮನ್ ಸರಕಾರವು ನಿಜಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡಿದೆ. ಆದುದರಿಂದ ನಾಜಿ-ಸೋಶಿಯಲಿಸ್ಟ್ ಪಕ್ಷದ ಮುಂದಾಳುಗಳು ಸಾರ್ವಜನಿಕ ಭಾಷಣ ಮಾಡಬಾರದೆಂಬ ನಿರ್ಬಂಧಗಳನ್ನು ಹಾಕಲಾಗಿದೆ. ಅಪರಲ್ಲಿ ಓಟ್ಟೊ ರೆನುರ್ ಎಂಬ ಸೇನಾನಿಯನ್ನೂ ಇಂತಹ ನಿರ್ಬಂಧಕ್ಕೊಳಪಡಿಸಲಾಗಿದೆ.

ನಾಜಿಗಳು ನಿಧಾನವಾಗಿ ತಮ್ಮ ಹಿಂದಿನ ಶಕ್ತಿಗಳನ್ನು ಪುನಃ ಗಳಿಸುತ್ತಿರುವರೆಂಬುಹಕ್ಕೆ ಸಾಕ್ಷಿಯಾಗಿ ಇತ್ತೀಚೆಗೆ ಕೆಲ ಸೇಕ್ಷನಿ ಪ್ರಾಂತದಲ್ಲಿ ನಡೆದ ಚುನಾವಣೆಗಳಲ್ಲಿ ಈ ನೂತನ ನಾಜಿಳಿಗೆ ಮಹತ್ವದ ಜಂಬಲ ದೊರತಿದೆ. 'ನವಭಾರತ'

ನಾಯಿಕೊಡೆಗಳಂತೆ ಪಕ್ಷಗಳು ಹುಟ್ಟಿಕೊಂಡರೆ ಆಗಲಿಲ್ಲ

ನಾಯಿಕೊಡೆಗಳಂತೆ ಬರೀ ಪಕ್ಷಗಳು ಹುಟ್ಟಿಕೊಳ್ಳುವುದರಿಂದ ಕಾಂಗ್ರೆಸ್ ಸರಕಾರದಿಂದ ಪಾರಾಗಲು ಸಾಧ್ಯವಿಲ್ಲವೆಂದು ಸರ್ವೋದಯವಾದೀ ಧುರೀಣರಾದ ಶ್ರೀ ಜಯಪ್ರಕಾಶ ನಾರಾಯಣರು ಹೇಳಿದರು. ಒಳ್ಳೇ ರೀತಿಯಿಂದ ಸಂಘಟಿಸಲ್ಪಟ್ಟ ಒಂದೇ ಒಂದು ಪಕ್ಷವು ಮಾತ್ರ ಕಾಂಗ್ರೆಸ್ಸಿನ ವಿರುದ್ಧ ನಿಲ್ಲಲು ಶಕ್ತವಾಗಬಹುದು ಎಂದೂ ಅವರು ಹೇಳಿದರು. ಮುಂದುವರಿಯುತ್ತಾ ಅವರು "ಸರ್ವೋದಯವಾದ ಮತ್ತು ಕಾಂಗ್ರೆಸ್ಸು ಇವೆರಡರಲ್ಲಿ ಒಂದನ್ನು ಜನತೆಯು ಆರಿಸಿಕೊಳ್ಳಬೇಕಾಗಿದೆ. ಕಾಂಗ್ರೆಸ್ಸು ಅಧಿಕಾರಕ್ಕೆ ಬರುವಂತೆ ನೀವು ಮಾಡಿತಕೊಟ್ಟಿರಿ. ಅದನ್ನು ಈಗ ಅಧಿಕಾರ ಚ್ಯುತ ಮಾಡುವ ಕೆಲಸವೂ ನಿಮ್ಮದೇ ಇದೆ" ಎಂದು ಹೇಳಿದರು.

ಬೇಕಾಗಿದ್ದಾರೆ

ನೆಲಜಿ ಹೈಯರ್ ಎಲಿಮೆಂಟರಿ ಶಾಲೆಗೆ ಮೂವರು ಉಪಾಧ್ಯಾಯರು ಬೇಕಾಗಿದ್ದಾರೆ. ಸ್ಕೂಲ್ ಫೈನಲ್ ಪಾಸಾದವರು ಯಾ ಈ ವರ್ಷ ಪರೀಕ್ಷೆಗೆ ಕೂತವರು ಆಗಿರತಕ್ಕದ್ದು. ಈ ತಾ. ೨೫ರೊಳಗೆ ಈ ಕೆಳಗಿನ ವಿಳಾಸಕ್ಕೆ ಬರತಕ್ಕದ್ದು.

ಪ್ರೆಸಿಡೆಂಟರು.
ನೆಲಜಿ ಶಾಲಾ ಕಮಿಟಿ
2-2 ಬಲ್ಲಮಾವಟಿ ಗ್ರಾಮ
ನಾಪೋಕ್ಲು ಪೋಸ್ಟ್.

ಮಾರಾಟಕ್ಕಿದೆ.

ಸೋಮವಾರಪೇಟೆ ನಾಡು ಗರಗಂದೂರು ಗ್ರಾಮದಲ್ಲಿ, ಸರಕಾರ ತಸ್ತೆ 17ನೇ ವೈಲು ಕಲ್ಲಿನಿಂದ 3 ಫರ್ಲಾಂಗು ಹೂತದಲ್ಲಿರುವ ನೀರಾವರಿ 1150 ಬಟ್ಟೆ ಭೂಮಿ, ಕೌಕೋಲು ಬಾರಿಸಟ್ಟೆ ಹಾಕಿ, ಹೆಂಚು ಹಾಕಿದ ಮನೆ, ಫಸಲಿಗೆ ಬರಲಿಕ್ಕಾದ 6 ಏಕ್ರೆ ಕಿತ್ತಳೆ ತೋಟ, 3 ಏಕ್ರೆ ಜಾಗ ವಗೈರೆ ಮಾರಾಟಕ್ಕಿದೆ. ಸದರಿ ಆಸ್ತಿಯು ತುಂಬಾ ವಿಸ್ತೀರ್ಣವಿರುವ ಪೈಸಾರಿ ಜಾಗಕ್ಕೆ ತಗಲಿಕೊಂಡಿದೆ. ಅಲ್ಲದೆ ಮೂದಾವುತ ಟವುನಿನ್ನಲ್ಲಿರುವ ತಿಂಗಳಿಗೆ ರೂ. 50/-ಬಾಡಿಗೆ ಬರುವ ದೊಡ್ಡ ಮನೆಯೂ ಮಾರಾಟಕ್ಕಿದೆ. ಕ್ರಯ 45 ಸಾವಿರ ಆಥವಾ ಅದಕ್ಕಿಂತ ಹೆಚ್ಚಿ ಕೊಡುವವರು, ಈ ಕೆಳಗಿನ ವಿಳಾಸಕ್ಕೆ ಪತ್ರ ಬರೆಯಬಹುದು.

N. K. GANAPAYA,
Madapur post,
4-4 N. Coorg.

ತಿಳಿಸಿರಿ.

ಭೂಮಿ, ತೋಟ, ಜಾಗ ಪೇಟೆಯಲ್ಲಿ ಮನೆ ಆಥವ ಮನೆ ಸೈಟು ಮಾರಲಿರುವವರು ಮತ್ತು ಕೊಂಡುಕೊಳ್ಳಲಿಚ್ಛಿಸುವವರು ಈ ಕೆಳಗಿನ ಪತ್ತೆಯಲ್ಲಿ ವಿಚಾರಿಸಿರಿ. ಅಲ್ಲದೆ ಬೇಕಾದವರಿಗೆ ಕರೆಯುವ ಎಮ್ಮೆ-ಹಸು ಮತ್ತು ಉಳುವ ಎತ್ತು ಮತ್ತು ಕೋಣಗಳನ್ನೂ ಒದಗಿಸಿ ಕೊಡಲಾಗುವುದು. ಬೇಕಿರುವವರು ತನಗೆ ಬೇಕಾದ ತಾರೀಕಿನ ಎಂಟು ದಿನಗಳಿಗೆ ಮುಂಚೆ ತಿಳಿಸಬೇಕಾಗಿದೆ. ವಿವರಗಳಿಗೆ ಈ ಪತ್ತೆಗೆ ಬರೆಯಬಹುದು.

P. A. N. & SONS,
Commission Agent,
Gonicoppal
26-17 S. Coorg.

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್,
ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400.
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಚೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ,
ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮೇನೇಜಿಂಗ್ ಡೈರೆಕ್ಟರ್:–ಲಾಲ ಶಂಕರ್ ಲಾಲ್.
ಮುಖ್ಯ ಖಚೇರಿ:– ಹೊಸ ಡೆಲ್ಲಿ.
52–6 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:–Life, Fire, Motor, and Marine.

ಯಂ. ಯು. ಅಚ್ಚಂಣ, ಇನ್ಸ್‌ಪೆಕ್ಟರು, ಮಡಿಕೇರಿ, ಕೊಡಗು.
ಎಂ. ಎ. ಬೆಳ್ಯಪ್ಪ, ಬ್ರಾಂಚ್ ಸೆಕ್ರೆಟರಿ, ಹಂಪನಕಟ್ಟೆ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪೈಮಾಡುವ ಪಂಪುಗಳು (Spraying Pumps)
7. ¾" ⅝" ½" ⅜" ¼" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.
(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರಯುವದು)

ಎಂ. ಎಸ್. ಸೋಮಯ್ಯ,
52–36 ಗೌರವ ಕಾರ್ಯದರ್ಶಿ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಮುಖಂಡನಾಗಬೇಕಾದರೆ?

ಬರೆದವರು:–ಶ್ರೀ ಎ. ರಾಮಣ್ಣ ಶೆಟ್ಟಿ, [illegible]

ಪ್ರಜಾ ಸರಕಾರ, ಸ್ವತಂತ್ರ ಭಾರತ, ಸ್ವರಾಜ್ಯವೆಂದು ಹೇಳುವ ಈ ಕಾಲದಲ್ಲಿ ಜನತಾ ಮುಖಂಡನಾಗುವದು ಬಹಳ ಕಷ್ಟವೆಂದು ಕೆಲವರ ಭಾವನೆ. ಬಹಳ ಸುಲಭವೆಂದು ಕೆಲವರ ಅನುಭವ. ಕಷ್ಟವೆಂಬುದು ಹೇಳುತ್ತಾ ಭಾಷಣ ಲೇಖನ ಮೂಡುವ ಜನರೆಷ್ಟು ಮಂದಿ. ಸುಲಭ ಎಂದು ಹೇಳುವ ಜನರು ಇಲ್ಲವೆಂದೇ ಕಾಣುತ್ತದೆ. ಇದರ ನಿಜಸ್ಥಿತಿ ತಿಳಿದೋ ತಿಳಿಯದೆಯೋ ದಿನ ದಿನವೂ ಕಾಣುವ ಚಲನ ಶಬ್ದನಗಳಿಂದ ಮುಖಂಡನಾಗುವ ಗುಟ್ಟು ತಿಳಿಯಬಹುದಾಗಿದೆ.

ಮೂತಿಸಂತೆ ಮನಸು, ಮನಸಿನಂತೆ ಕಾರ್ಯವೆಂಬ ಒಂದು ಕಾಲವಿತ್ತು. ಆಗ ಮುಖಂಡನಾದವನು ಎಲ್ಲರಿಗಿಂತ ಒಳ್ಳೆಯ ನಡತೆ, ಗುಣ, ಸ್ವಭಾವ ಇರುವವನಾಗಿದ್ದನು. ಕಾಲ ಚಕ್ರದ ತಿರುಗಾಟದಲ್ಲಿ ಆವನ ಕಾಲಹೋಗಿ ಈಗ ಒಳ್ಳೆಯ ಕಾಲ ಬಂದಿದೆ. ಗಾಂಧೀಜಿಯ ಮರಣವೇ ಈ ಎರಡು ಕಾಲಗಳ ಸಂಧಿಕಾಲ, ಸಂಕ್ರಾಂತಿಯ ಸೂಚನೆ.

ಧಾರ್ಮಿಕ, ರಾಜಕೀಯ, ಸಾಹಿತ್ಯ, ಕಲೆ ವಿಜ್ಞಾನ, ಮುಂತಾದ ವಿವಿಧ ರಂಗಗಳಲ್ಲಿ ಬಹಳ ಮಂದಿ ಮಹನೀಯರು ಕೀರ್ತಿಶಾಲಿಗಳಾಗಿ ಮೆರೆದಿರುವ ದೇಶ ನಮ್ಮದು. ಆಗಿ ಹೋದವರ ಕುರಿತು ನಾವು ಕೊರತೆ ಹೇಳುವಾಗ ಅವರ ಜೀವನದ ಸರ್ವಕಾರ್ಯಗಳಲ್ಲಿ ನೂರರಲ್ಲಿ ನಾಲ್ಕಾರು ಭಾಗಗಳು ಅಪೂರ್ಣವಾಗಿರಬಹುದು. ಚಂದ್ರನಲ್ಲಿ ಕಲೆಗಳಿದ್ದರೂ ಭೂಮಿಗೆ ಬೆಳಕನ್ನು ಕೊಡುವಂತೆ ಅವರ ಮಹಾಗುಣಗಳ ಇದಿರಲ್ಲಿ ಕೊರತೆಗಳು ಕಾಣಿಸದೆ ಹೋಗಿರಬಹುದು. ಆದರೆ ಇಂದಿನ ಸ್ಥಿತಿ ಬೇರೆ. ಅದಕ್ಕೆ ತೀರಾ ವಿರುದ್ಧ. ಮುಖಂಡನೆನಿಸಬೇಕಾದರೆ ಮೊದಲು ಅವನು ಅಖಂಡನಾಗಿರಬೇಕು. ಯಾತ ಕತ್ತಿ, ಕೋವಿ ಲಾತಿಗಳಿಗೂ ತುಂಡಾಗದ ಅಖಂಡನಾಗಿರಬೇಕು. ಅಂದರೆ ಅಷ್ಟು ಗಟ್ಟಿ ಎಂತಲೇ ಅರ್ಥವಲ್ಲ. ಸ್ಪಂಜಿನಂತೆ ಮೆದುವಾಗಿ, ನಾರಾಗಿದ್ದರೂ ಅಗಬಹುದು. ಹಸವಾಗಿ ಎರಕ ಹೊಯ್ದು ಸಾವೂನಿನಂತಿದ್ದರೂ ಅಗಬಹುದು. ಅಂತೂ ಅಖಂಡವಾಗಬೇಕು. ಆ ಮೇಲೆ ಉಳಿದ ಪರಿಕರಗಳನ್ನು ಹೊಂದಿಸಿಕೊಳ್ಳಬೇಕು. ಊರಿನಲ್ಲಿ ಬಹುಮಂದಿ ಸೇರಿರುವ ಕಾಂಗ್ರೆಸ್ ಸಂಸ್ಥಾ ಸಂಸ್ಥೆಯ ಮೆಂಬರನಾಗಬೇಕು. ಅದಕ್ಕೆ ಒಪ್ಪುವ ವೇಷಭೂಷಣಗಳು ಅಚ್ಚುಕಟ್ಟಾಗಿರಬೇಕು. ಪ್ರತಿದಿನವೂ ಮಡಿ ಮಾಡಿದ ಬಟ್ಟೆಗಳನ್ನೇ ಹಾಕಿಕೊಂಡು, ಪ್ರತಿದಿನವೂ ಮುಖಕ್ಷೌರ, ಮುಖಾಲಂಕಾರ ಮಾಡಿಕೊಂಡು, ಸುಖ ವಾಹನಾರೂಢನಾಗಿ, ಸುಖ ಜೀವಿಯಾಗಿ, ಗಟ್ಟಿಯಾದ ಧ್ವನಿಯುಳ್ಳವನಾಗಿರಬೇಕು. ಕೈಯ್ಯಲ್ಲಿ ನಾಲ್ಕಾರು ಇಂಗ್ಲಿಷ್ ಪತ್ರಿಕೆಗಳು, ಜತೆಯಲ್ಲಿ ನಾಲ್ಕಾರು ಮಂದಿ 'ಸಹಭಾಸ್' ಅನ್ನುವ ಮಂದಿ ಮಾಗಧರು ಇರಬೇಕು. ಅಲ್ಲಲ್ಲಿ ಸಭೆಗಳಿಗೆ ಹೋಗಿ, ಉದ್ದುದ್ದ ಭಾಷಣಮಾಡಿ, ದೇಶ–ಭಾಷೆ–ಸಮಾಜದ ಸೇವೆಯ ಕುರಿತು ತಾನು ಮಾಡತಕ್ಕ ಕಾರ್ಯ ಕಲಾಪಗಳನ್ನು ವಿವರಿಸಿ, ಇತರರು ಮಾಡತಕ್ಕ ಸಣ್ಣ ತಪ್ಪುಗಳನ್ನು ಹೊಡ್ಡದಾಗಿ ಮಾಡಿ ವರ್ಣಿಸಿ, ಜನತೆಯನ್ನು [illegible] ಬೇಕು. ನಾಲ್ಕಾರು ಪತ್ರಿಕೆಗಳನ್ನು ಹೊರಡಿಸಿ, ಅಥವಾ ಊರಿನ ನಾಲ್ಕಾರು [illegible] ಪತ್ರಿಕೆಯ ಸಂಪಾದಕರನ್ನು ಒಲಿಸಿ ಹೊಗಳಿಸಿಕೊಳ್ಳಬೇಕು. ದೂರ ಹೋದ ಪಂಡಿತರಿಗೆ, ವಿದ್ವಾಂಸರಿಗೆ, ಕಲಾವಿದರಿಗೆ ಧಾರಾಳ ಉಪಚಾರ ಮಾಡಿ, ಅವರು ಹೋದಲ್ಲೆಲ್ಲಾ ತನ್ನನ್ನು ಹೊಗಳುವಂತೆ ಮಾಡಿಬಿಡಬೇಕು. ತನ್ನ ಊರಿನಲ್ಲಿ ಇರುವವರನ್ನೆಲ್ಲಾ ಒಂದಲ್ಲ ಒಂದು ವಿಧವಾಗಿ ತಲೆಯೆತ್ತದಂತೆ ಒತ್ತಿ ಹಿಡಿಯಬೇಕು. ತನ್ನ ಹಿರಿಯರು ಮಾಡಿಟ್ಟ ಸಂಪತ್ತು ಧಾರಾಳವಾಗಿದ್ದರೂ, ಇಲ್ಲದಿದ್ದರೂ ಖರ್ಚಿಗೆ ಸಾಕಾಗುವಷ್ಟು ಹಣವು ಹಿಂದಿನ ಬಾಗಿಲಿನಿಂದ ಸದಾ ಬರುವಂತೆ ಮಾಡಿಕೊಳ್ಳಬೇಕು; ಅದನ್ನು ಬಿ. ಎಂ. ಅಥವಾ ಲಂಚ, ಇಲ್ಲವೇ ಕಾಣಿಕೆ, ಯಾ ಲಾಭ ಏನೇ ಹೇಳಲಿ, ಅದನ್ನೆಲ್ಲಾ ಲಕ್ಷಿಸಬಾರದು. ತನ್ನನ್ನು ಟೀಕಿಸುವವರನ್ನು ಅವರವರ ಸ್ಥಿತಿಗೆ ತಕ್ಕ ಕಪ್ಪಕೊಟ್ಟು ಬಾಯಿ ಮುಚ್ಚಿಸಬೇಕು. ಅಥವಾ ರುಂಡವನ್ನು ಜೆಂಡಾಡಬೇಕು. ಊರಿನ ಬೇರೆ ಬೇರೆ ಸಂಘೆ–ಸಂಸ್ಥೆಗಳಿಗೆ ಭೇಟಿ ಕೊಟ್ಟು ತಾನು ಅದರ ಹಿತ ಚಿಂತಕನೆಂದು ತೋರಿಸಿಕೊಳ್ಳಬೇಕು. ಒಮ್ಮೊಮ್ಮೆ ಇದಕ್ಕಾಗಿ ಸ್ವಲ್ಪ ಹಣವನ್ನು ಕೈಬಿಡಬೇಕು. ತನ್ನ ಒಲವನ್ನು ಪರೀಕ್ಷಿಸುವ ಸಮಾಜದ ತೀಕ್ಷ್ಣ ದೃಷ್ಟಿಯವರ ನೋಟಕ್ಕೆ ಸಿಗದಂತೆ ತನ್ನ ವ್ಯವಹಾರಗಳ ಸುತ್ತ ಸರ್ವಗಾವಲು ಇಡಬೇಕು. ಐದು ಮಂದಿಗಳಾದ ಬಡವರ, ರೈತರ ಕೂಲಿಗಳ, ನೌಕರರ ಹಿತವನ್ನೇ ಲೇಖನ–ಭಾಷಣಗಳಿಂದ ಪ್ರಕಟಿಸಬೇಕು. ಶ್ರೀಮಂತರಿಗೆ ವ್ಯಾಪಾರಿಗಳಿಗೆ ಸರಕಾರದ ಹಿರಿಯ ಅಧಿಕಾರಿಗಳಿಗೆ, ಬೇರೆ ಮುಖಂಡರಿಗೆ, ಒಳಗಿಂದೊಳಗೆ ಧಾರಾಳವಾಗಿ ಲಂಚ–ಕಪ್ಪ–ಕಾಣಿಕೆ ಸಂಭಾವನೆ ಕೊಡುತ್ತಿರಬೇಕು. ತನ್ನ ಕುಟುಂಬದ, ಜಾತಿಯ, ಊರಿನ, ಸ್ನೇಹಿತರ ಬಗ್ಗೆ ಸರ್ವ ವಿಧದ ಸಹಾಯ ಸಲ್ಲಿಸುತ್ತಿರಬೇಕು. ಕಡೆಗೆ ಎಲ್ಲರಿಗೂ ಏನೂ ಮಾಡುವದಕ್ಕಾಗದಿದ್ದರೂ ತನ್ನ ಹೆಂಡತಿ ಮಕ್ಕಳಿಗೆ ತಾನು ಸತ್ತು ನೂರು ವರ್ಷಗಳ ವರೆಗೆ ಬೇಕಾಗುವಷ್ಟು ಸೊತ್ತನ್ನು ಯಾರೂ ತಿಳಿಯದಂತೆ ಸಂಗ್ರಹಿಸಿಡಬೇಕು. ಧರ್ಮ, ದೇವರು, ಭಕ್ತಿ, ಜ್ಞಾನ, ಸತ್ಯಗಳ ಕುರಿತು ಉದ್ದವಾಗಿ ಮಾತಾಡಲೂ ಬಾಯಿಪಾಠ ಕಲಿತುಕೊಂಡು, ಎಲ್ಲಾ ಮತ ಧರ್ಮದಲ್ಲಿಯೂ ಸಮಾನ ದೃಷ್ಟಿಯೆಂದು ತೋರಿಸಿಕೊಂಡು, ತನ್ನ ಮತವನ್ನು ಮಾತ್ರ ಚೆನ್ನಾಗಿ ಬದುಕಿಸುವುದಕ್ಕಾಗಿ, ಇತರ ಮತಗಳೆನೆಲ್ಲಾ ಗುಪ್ತವಾಗಿ ಶಿಕ್ಷಿಸಿ, ಸುಲಿದು, ಹಿಂಸಿಸಿ ಒದೆಯುತ್ತಿರಬೇಕು. ಸಮಾಜದಿಂದ ಹಲವು ದಾರಿಗಳಿಂದ ಗುಪ್ತವಾಗಿ ಧಾರಾಳ ಸಂಪಾದನೆ ಮಾಡಿ, ಸರ್ವ ಹಿತಕಾರಿಯೂದ ಒಂದೆರಡು ಕೆಲಸಗಳನ್ನು ಮಾಡುವಾಗ ಅದು ದೇಶದಾದ್ಯಂತವೂ ತಿಳಿಯುವಂತೆ ಬಲವಾಗಿ ಪ್ರಕಟಿಸುತ್ತಿರಬೇಕು. ಇದರಿಂದ ಪ್ರತಿಯೊಬ್ಬನೂ ಮುಂದಾಳುವಾಗಿ, ಓಟನಲ್ಲಿ ಜೈಸಿ, ಎಲ್ಲರ ಮೇಲೂ ಅಧಿಕಾರಮಾಡಬಹುದು.

'ನವಯುಗ'